PRGI : KNKAN/26/A0629 ವಿಜಯನಗರ-ಬಳ್ಳಾರಿ-ಕೊಪ್ಪಳ-ರಾಯಚೂರು-ಗದಗ-ಯಾದಗಿರಿ-ದಾವಣಗೆರೆ-ಹಾವೇರಿ-ಕಲಬುರ್ಗಿ- ಜಿಲ್ಲೆಗಳಲ್ಲಿ ಪ್ರಸಾರಿತ

NO.PMG/KA/NK/BLY/04/2026-2028

# ಹೊಸಪೇಟೆ ಧ್ವನಿ

HOSAPETE DHWANI

Kannada Daily morning news paper

ಸ್ವಾಸ್ಥ್ಯ ಸಮಾಜಕ್ಕಾಗಿ ನಮ್ಮ ಧ್ವನಿ

ಸಂಪಾದಕರು ಕೆ.ಪ್ರಕಾಶ ಕಾಕುಬಾಳು

Editor : K. prakash Kakubalu ಮೊ. 9342568684 VIJAYANAGARA ಕನ್ನಡ ದಿನ ಪತ್ರಿಕೆ

ಸರ್ಕಾರಿ ಆಸ್ಪತ್ರೆಗಳಲ್ಲಿ ಸುಮಾರು ಶೇ.95ರಷ್ಟು ಸೌಲಭ್ಯಗಳು ಲಭ್ಯವಿದ್ದು, ವೈದ್ಯಕೀಯ ಸಿಬ್ಬಂದಿ ಅಥವಾ ಔಷಧಗಳ ಯಾವುದೇ ಗಂಭೀರ ಕೊರತೆಯಿಲ್ಲ ಮಹಿಳೆಯರು ಮತ್ತು ಮಕ್ಕಳಿಗೆ ಆರೋಗ್ಯ ಸೇವೆ ಒದಗಿಸುವ ಆಸ್ಪತ್ರೆಗಳು ಸೇರಿದಂತೆ ಸರ್ಕಾರಿ ಆಸ್ಪತ್ರೆಗಳಲ್ಲಿ ಸೌಲಭ್ಯಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ತಕ್ಷಣವೇ ಪರಿಹರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ.

–ಯು.ಟಿ. ಖಾದರ್
ಆರೋಗ್ಯ ಸಚಿವ



ಸಂಪುಟ : 01 ಸಂಚಿಕೆ : 187 ಭಾನುವಾರ ದಿನಾಂಕ : 11-10-2026 ಪುಟ-4 ಬೆಲೆ : 2 ರೂ. E mail: hosapetedhwani32026@gmail.com

Volume 01 Issue : 187 Sunday Date: 11-10-2026 Page-4 Rs : 2 ರೂ. E mail: hosapetedhwani32026@gmail.com

## ಮೈಸೂರು ದಸರಾ ಗಾನ ಭಾರತಿ ವೇದಿಕೆಗೆ ಹಗರಿಬೊಮ್ಮನಹಳ್ಳಿಯ ಸಂಗೀತ ಶಿಕ್ಷಕಿ ಶಾರದ ಆಯ್ಕೆ

**ಹೊಸಪೇಟೆ ಧ್ವನಿ ನ್ಯೂಸ್ :**

**ಹಗರಿಬೊಮ್ಮನಹಳ್ಳಿ:** ತಾಲೂಕಿನ ವಲ್ಲಭಾಪುರದ ಮುರಾರ್ಜಿ ವಸತಿ ಶಾಲೆಯಲ್ಲಿ ಸಂಗೀತ ಶಿಕ್ಷಕಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಸಂಗೀತ ಕಲಾವಿದೆ ಶಾರದಾ ಅವರು ಮೈಸೂರು ದಸರಾ ಉತ್ಸವದ ಸಂಗೀತ ಕಾರ್ಯಕ್ರಮಕ್ಕೆ ಆಯ್ಕೆಯಾಗಿ ದ್ದಾರೆ.



ಅಕ್ಟೋಬರ್ 15ರಂದು ಮೈಸೂರು ದಸರಾದ ಗಾನ ಭಾರತಿ ವೇದಿಕೆಯಲ್ಲಿ ನಡೆಯಲಿರುವ ಸಂಗೀತ ಪ್ರದರ್ಶನದಲ್ಲಿ ಅವರು ಭಾಗವಹಿಸಲಿದ್ದಾರೆ.

ಇವರ ಆಯ್ಕೆಗೆ ಹಗರಿಬೊಮ್ಮನಹಳ್ಳಿಯ ಸಂಗೀತಾಸಕ್ತರು ಅಭಿನಂದನೆ ಸಲ್ಲಿಸಿದ್ದಾರೆ.

# ವಿದ್ಯಾರ್ಥಿಗಳು ಕೌಶಲ್ಯ ಬೆಳೆಸಿಕೊಂಡು ಭವಿಷ್ಯಕ್ಕೆ ಸಿದ್ಧರಾಗಬೇಕು: ಕುಲಸಚಿವ ಎನ್.ಎಂ. ಸಾಲಿ ಕರೆ

**ಹೊಸಪೇಟೆ ಧ್ವನಿ ನ್ಯೂಸ್ :**

**ಹೊಸಪೇಟೆ:** ವಿದ್ಯಾರ್ಥಿಗಳು ಜೀವನದಲ್ಲಿ ಎದುರಾಗುವ ಕೊರತೆ, ಬಡತನಗಳನ್ನು ಮೆಟ್ಟಿ ನಿಂತು ಸ್ವಾವಲಂಬಿಗಳಾಗಬೇಕು ಮತ್ತು ಭವಿಷ್ಯಕ್ಕೆ ಬೇಕಾದ ಕೌಶಲ್ಯಗಳನ್ನು ರೂಪಿಸಿಕೊಳ್ಳಬೇಕು ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಸಚಿವ ಎನ್.ಎಂ. ಸಾಲಿ ಕರೆ ನೀಡಿ–ದರು.

ನಗರದ ಶ್ರೀ ಶಂಕರ್ ಆನಂದ್ ಸಿಂಗ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸರ್ವ ಸಂಘಗಳ ಉದ್ಘಾಟನೆ ಮತ್ತು ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಜೀವನದಲ್ಲಿ ತಂದೆ–ತಾಯಿ ಇಲ್ಲದಿರುವುದು, ಬಡತನ, ಅಂಗವೈಕಲ್ಯದಂತಹ ಸಮಸ್ಯೆಗಳಿರುವ ವಿದ್ಯಾರ್ಥಿಗಳೇ ಹೆಚ್ಚು ಸಾಧನೆ ಮಾಡುತ್ತಾರೆ. ಎಷ್ಟೇ ಬಡತನ ಇದ್ದರೂ ಅದನ್ನು ಯಾರಿಗೂ ತೋರಿಸಿಕೊಳ್ಳದೆ ಸ್ವಾವಲಂಬಿಗಳಾಗಿರಬೇಕು ಎಂದು ಸಲಹೆ ನೀಡಿದರು.



ಮುಖ್ಯ ಭಾಷಣಕಾರರಾಗಿ ಆಗಮಿಸಿದ್ದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರೊ. ಹೆಚ್.ಡಿ. ಪ್ರಶಾಂತ್ ಮಾತನಾಡಿ, ಇದು ಒಳ್ಳೆಯದು ಯಾವುದು, ಕೆಟ್ಟದ್ದು ಯಾವುದು ಎಂದು ಗೊತ್ತಾಗದ ಕಾಲ. ಮೊಬೈಲ್‌ನಲ್ಲಿ ಸುಳ್ಳನ್ನು ಸತ್ಯವಾಗಿ, ಸತ್ಯವನ್ನು ಸುಳ್ಳಾಗಿ ತೋರಿಸಲಾಗುತ್ತಿದೆ. ಮುಂದಿನ ಕಾಲಘಟ್ಟವನ್ನು ಎದುರಿಸಲು ವಿದ್ಯಾರ್ಥಿಗಳು ಪ್ರಮುಖ ಕೌಶಲ್ಯಗಳನ್ನು ಬೆಳೆಸಿಕೊಂಡು ಸಿದ್ಧರಾಗಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ಪ್ರೊ. ವೀರಭದ್ರಪ್ಪ ತಂಬ್ರಹಳ್ಳಿ ಮಾತನಾಡಿ, ವಿದ್ಯಾರ್ಥಿ ಹಂತದಲ್ಲೇ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿ ಪ್ರಥಮ ವರ್ಷದ ವಿದ್ಯಾರ್ಥಿಗಳನ್ನು ಸ್ವಾಗತಿಸಿದರು.

ಹಾಸ್ಯ ಕಲಾವಿದ ಹಾಗೂ ಮಿಮಿಕ್ರಿ ಕಲಾವಿದ ಶಿವರಾಜ್ ವಿ. ಶಿಕ್ಷಕರು ತಮ್ಮ ಹಾಸ್ಯದ ಮೂಲಕ ಎಲ್ಲರನ್ನು ರಂಜಿಸಿದರು.

ಪ್ರಾಸ್ತಾವಿಕವಾಗಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ದಾರುಕಸ್ವಾಮಿ ಮಾತನಾಡಿ ಕಾಲೇಜಿನ ಹಾದಿ ಮತ್ತು ಸಾಧನೆಗಳ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಬೋಧಕ, ಬೋಧ–ಕೇತರ ಸಿಬ್ಬಂದಿ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕು. ಸೌಂದರ್ಯ ಪ್ರಾರ್ಥಿಸಿದರು, ಭೌತಶಾಸ್ತ್ರ ವಿಭಾಗದ ಗುರುರಾಜ್ ಸ್ವಾಗತಿಸಿದರು, ರಾಜ್ಯಶಾಸ್ತ್ರ ವಿಭಾಗದ ಡಾ. ಬಾಬು ರಾಜೇಂದ್ರಪ್ರಸಾದ್ ಕೆ. ವಂದಿಸಿದರು.

ಕನ್ನಡ ವಿಭಾಗದ ಮುಖ್ಯಸ್ಥ ಸಿ. ದೇವಣ್ಣ ಕಾರ್ಯಕ್ರಮ ನಿರೂಪಿಸಿದರು.

ಪತ್ರಿಕೋದ್ಯಮ ಉಪನ್ಯಾಸಕ ಬಾಣದ ಮುರುಳಿಧರ ಇದ್ದರು.

# ಇಂದಿನಿಂದ ಕನಕದುರ್ಗಮ್ಮ ದೇವಸ್ಥಾನದಲ್ಲಿ ದಸರಾ ನವರಾತ್ರಿ ಉತ್ಸವ: ಪೂಜಾರಿ ಗಾದೆಪ್ಪ

## ವಿಜಯದಶಮಿಯಂದು ಸಂಜೆ 6ಕ್ಕೆ ಪ್ರಧಾನ ಪಲ್ಲಕ್ಕಿ ಉತ್ಸವ; ದೀಪಾಲಂಕಾರ, ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ

**ಬಳ್ಳಾರಿ:** ನಗರದ ಅಧಿದೇವತೆ ಶ್ರೀ ಕನಕದುರ್ಗಮ್ಮ ದೇವಸ್ಥಾನದಲ್ಲಿ ಇಂದಿನಿಂದ 10 ದಿನಗಳ ಕಾಲ ದಸರಾ ಶರನ್ನವರಾತ್ರಿ ಮಹೋತ್ಸವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು

ದೇವಸ್ಥಾನದ ಧರ್ಮಕರ್ತ ಪೂಜಾರಿ ಗಾದೆಪ್ಪ ತಿಳಿಸಿದರು.

ಅವರು ನಗರದ ಕನಕದುರ್ಗಮ್ಮ ದೇವಸ್ಥಾನದ ಯಾತ್ರಿ ನಿವಾಸದಲ್ಲಿ ಶನಿವಾರದಂದು ಸುದ್ದಿಗೋಷ್ಠಿಯನ್ನು ನಡೆಸಿ ಮಾತನಾಡಿ , ನವರಾತ್ರಿ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ನವದುರ್ಗೆಯರ ಅಲಂಕಾರ, ಲಲಿತ ಸಹಸ್ರನಾಮ ಪಠಣ, ಪುರಾಣ ಪಠಣ, ಭಜನೆ, ಸಂಗೀತ, ನೃತ್ಯ, ನಾಟಕ ಸೇರಿದಂತೆ ವಿವಿಧ ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ವಿಜಯದಶಮಿಯಂದು ದೇವಿಯ ಪ್ರಧಾನ ಪಲ್ಲಕ್ಕಿ ಉತ್ಸವವನ್ನು ಅದ್ದೂರಿಯಾಗಿ ನಡೆಸಲಾಗುವುದು. ಉತ್ಸವದಲ್ಲಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ದೇವಿಯ ಕೃಪೆಗೆ ಪಾತ್ರರಾಗಬೇಕು ಎಂದು ಮನವಿ ಮಾಡಿದರು. ದಸರಾ ಮಹೋತ್ಸವದ ಅಂಗವಾಗಿ ನಗರದ ಎನ್.ಪಿ. ಸರ್ಕಲ್‌ನಿಂದ ಕನಕದುರ್ಗಮ್ಮ ದೇವಸ್ಥಾನದವರೆಗೆ, ರಾಯಲ್ ಸರ್ಕಲ್ ರಸ್ತೆ ಅಂಡರ್ ಬೆಡ್ಸ್ ಸೇತುವೆ, ಮೋಕಾ ರಸ್ತೆ, ರೇಣುಕ ಕಿಚನ್



ಹಾಗೂ ಕಪ್ಪಗಲ್ಲು ರಸ್ತೆ ಲಯನ್ಸ್ ಕ್ಲಬ್‌ವರೆಗೆ ವಿದ್ಯುತ್ ದೀಪಾಲಂಕಾರ ಮಾಡಲಾಗುವುದು. ದೇವಸ್ಥಾನದ ಒಳ ಆವರಣದಲ್ಲಿಯೂ ವಿಶೇಷ ಬೆಳಕಿನ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಭಕ್ತರ ಅನುಕೂಲಕ್ಕಾಗಿ ಶಾಮಿಯಾನ, ಬ್ಯಾರಿಕೇಡ್‌ಗಳು ಹಾಗೂ ವೇದಿಕೆ ವ್ಯವಸ್ಥೆ ಮಾಡಲಾಗುವುದು. ದುರ್ಗಾಷ್ಟಮಿ ಮತ್ತು ವಿಜಯದಶಮಿ ದಿನಗಳಂದು ದೇವಸ್ಥಾನದಲ್ಲಿ ವಿಶೇಷ ಹೂವಿನ ಅಲಂಕಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನವರಾತ್ರಿ ಉತ್ಸವದ ಹತ್ತು ದಿನಗಳಲ್ಲೂ ದೇವಿಗೆ ಪ್ರತಿದಿನ ವಿಭಿನ್ನ ಅಲಂಕಾರಗಳನ್ನು ಮಾಡಲಾಗುತ್ತದೆ. ನವದುರ್ಗೆಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿ, ಪ್ರತಿದಿನ ದೇವಿಯ ವಿವಿಧ ರೂಪಗಳಲ್ಲಿ ಅಲಂಕರಿಸಿ ಪೂಜಿಸಲಾಗುವುದು. ಮೂಲ ದೇವಿಗೆ ವಿಶೇಷವಾಗಿ ಬಂಗಾರದ ಆಭರಣಗಳಿಂದ ಅಲಂಕಾರ ಮಾಡಲಾಗುತ್ತದೆ. ದೇವಸ್ಥಾನದ ಒಳ ಆವರಣದಲ್ಲಿ ಪ್ರತಿದಿನ ಅಡ್ಡ ಪಲ್ಲಕ್ಕಿ ಉತ್ಸವ ನಡೆಯಲಿದ್ದು, ವಿಜಯದಶಮಿಯಂದು ದೇವಿಯ ಪ್ರಧಾನ ಪಲ್ಲಕ್ಕಿ ಉತ್ಸವವನ್ನು ಹೊರಗಡೆ ಅದ್ದೂರಿಯಾಗಿ ನಡೆಸಲು ಸಿದ್ಧತೆ ಮಾಡಲಾಗಿದೆ. ಪುಷ್ಕರಣಿ, ಪಲ್ಲಕ್ಕಿ ಉತ್ಸವ ಹಾಗೂ ಇತರ ಧಾರ್ಮಿಕ ವ್ಯವಸ್ಥೆಗಳಿಗೂ ಅಗತ್ಯ ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದರು.

ಪುಟ– 3

# ಕ್ರೀಡೆ ದೈಹಿಕ–ಮಾನಸಿಕ ಸದೃಢತೆಗೆ ಸಹಕಾರಿ: ಡಾ. ಗೋವಿಂದ

**ಹೊಸಪೇಟೆ ಧ್ವನಿ ನ್ಯೂಸ್ :**

**ಸಂಡೂರು :** ಕ್ರೀಡಾಕೂಟ ಗಳನ್ನು ಯಶಸ್ಸಿನ ಮೆಟ್ಟಿಲು ಗಳನ್ನಾಗಿ ಬಳಸಿಕೊಳ್ಳಬೇಕು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಹಿರಿಯ ಉಪನ್ಯಾಸಕ ಡಾ. ಗೋವಿಂದ ಕರೆ ನೀಡಿದರು.

ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ನಂದಿಹಳ್ಳಿ ಸ್ನಾತ–ಕೋತ್ತರ ಕೇಂದ್ರದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಗುಡ್ಡಗಾಡು ಓಟದ ಸ್ಪರ್ಧೆಗೆ ಸಂಡೂರಿನ ಪೊಲೀಸ್ ಠಾಣೆ ಮುಂಭಾಗದಲ್ಲಿ ಚಾಲನೆ ನೀಡಿ ಅವರು ಮಾತನಾಡಿದರು.



ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಲು ಕ್ರೀಡೆ ಹಾಗೂ ಆರೋಗ್ಯಕರ ಚಟುವಟಿಕೆಗಳು ಅಗತ್ಯ. ವಿದ್ಯಾರ್ಥಿಗಳು ಶಿಕ್ಷಣದ ಜತೆಗೆ ಕ್ರೀಡೆಗೂ ಆದ್ಯತೆ ನೀಡಬೇಕು. ಕ್ರೀಡೆಯು ಆತ್ಮವಿಶ್ವಾಸ, ಶಿಸ್ತು ಮತ್ತು ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಬೆಳೆಸುತ್ತದೆ ಎಂದರು.

ವಿದ್ಯಾರ್ಥಿಗಳು ಸ್ಥಳೀಯ ಕಾಲೇಜು ಮಟ್ಟದಿಂದ ಅಂತರ ಕಾಲೇಜು, ಅಂತರ ವಿಶ್ವವಿದ್ಯಾಲಯ, ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಪ್ರತಿಭೆ ಪ್ರದರ್ಶಿಸಬೇಕು ಎಂದು ಸಲಹೆ ನೀಡಿ–ದರು.

ಪೊಲೀಸ್ ಠಾಣೆ ಮುಂಭಾಗದಿಂದ ಆರಂಭವಾದ 10 ಕಿ.ಮೀ ಓಟವು ನಂದಿಹಳ್ಳಿ ಸ್ನಾತಕೋತ್ತರ ಕೇಂದ್ರದ ಮಯೂರ ಭವನದ ಮುಂಭಾಗದಲ್ಲಿ ಮುಕ್ತಾಯಗೊಂಡಿತು. ಸ್ಪರ್ಧೆಯಲ್ಲಿ ವಿವಿಧ ಕಾಲೇಜುಗಳ 69 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪುರುಷರ ವಿಭಾಗದಲ್ಲಿ ಎಸ್‌ಜಿಆರ್‌ಸಿಎಂ ಮಹಾವಿದ್ಯಾಲಯ ಬಳ್ಳಾರಿ ಪ್ರಥಮ, ಗಂಗಾವತಿ ಭಾಗ್ಯಮ್ಮ ಗ್ರಾಮೀಣ ಮಹಾವಿದ್ಯಾಲಯ ದ್ವಿತೀಯ ಸ್ಥಾನ ಪಡೆದರೆ, ಮಹಿಳೆಯರ ವಿಭಾಗದಲ್ಲಿ ಸರಳಾದೇವಿ ಮಹಾವಿದ್ಯಾಲಯ ಪ್ರಥಮ ಸ್ಥಾನ ಪಡೆಯಿತು.

ಈ ಸಂದರ್ಭದಲ್ಲಿ ನಂದಿಹಳ್ಳಿ ಸ್ನಾತ–ಕೋತ್ತರ ಕೇಂದ್ರದ ನಿರ್ದೇಶಕ ಡಾ. ಎಚ್. ತಿಪ್ಪೇಸ್ವಾಮಿ, ವಿ.ಎಸ್.ಕೆ ವಿವಿ ದೈಹಿಕ ಶಿಕ್ಷಣ ಮತ್ತು ಕ್ರೀಡಾ ವಿಭಾಗದ ಮುಖ್ಯಸ್ಥ ಡಾ. ಸಂಪತ್ ಕುಮಾರ್, ಸಹಾಯಕ ಕ್ರೀಡಾ ನಿರ್ದೇಶಕ ಶಿವರಾಮಪ್ಪರಾಗಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಡಾ. ಗುರುಬಸವರಾಜ್, ಡಾ. ಮುತ್ತೇಗೌಡ, ಡಾ. ಕವಿತಾ ಸಂಘನಗೌಡರ್, ಪಂಪನಗೌಡ, ಶಿವಕುಮಾರ್, ಪ್ರದೀಪ್, ಗೌತಮ್ ಉಪಸ್ಥಿತರಿದ್ದರು.

# ಎಸ್‌ಐಆರ್ ಪ್ರಕ್ರಿಯೆ ರದ್ದತಿಗೆ ಆಗ್ರಹಿಸಿ ನಗರದಲ್ಲಿ ಪ್ರತಿಭಟನೆ




**ಹೊಸಪೇಟೆ ಧ್ವನಿ ನ್ಯೂಸ್ :**

**ಹೊಸಪೇಟೆ:** ಮತದಾರರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಎಐಡಿಎಸ್‌ಒ, ಎಐಡಿವೈಒ ಹಾಗೂ ಎಸ್‌ಎಫ್‌ಐ ಸಂಘಟನೆಗಳ ನೇತೃತ್ವದಲ್ಲಿ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಲಾಯಿತು.

ಸ್ಥಳೀಯ ತಹಶೀಲ್ದಾರ್ ಕಚೇರಿ ಎದುರು ಜರುಗಿದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಎಐಡಿವೈಒ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಪ್ರಕಾಶ್ ನಾಯ್ಕ್, ಮತದಾರರ ಹಕ್ಕುಗಳನ್ನು ಕಸಿದುಕೊಳ್ಳುವ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು. ಎಸ್‌ಐಆರ್ ಪ್ರಕ್ರಿಯೆ ರದ್ದಾಗುವವರೆಗೆ ಹೋರಾಟ ಮುಂದುವರಿಯಲಿದೆ ಎಂದರು.

ಎಐಡಿವೈಒ ಜಿಲ್ಲಾ ಕಾರ್ಯದರ್ಶಿ ಪಂಪಾಪತಿ ಮಾತನಾಡಿ, ದೇಶದ 13 ಕೋಟಿ ಮತದಾರರ ಹಕ್ಕುಗಳನ್ನು ಕಸಿದುಕೊಳ್ಳಲು ಹೊರಟಿರುವ ಎಸ್‌ಐಆರ್ ಪ್ರಕ್ರಿಯೆಯನ್ನು ಸಂಪೂರ್ಣವಾಗಿ ರದ್ದುಗೊಳಿಸಬೇಕು. ಇದರ ನೈತಿಕ ಹೊಣೆ ಹೊತ್ತು ಚುನಾವಣಾ ಆಯುಕ್ತರು ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಅವರನ್ನು ಸೇವೆಯಿಂದ ವಜಾ ಮಾಡಬೇಕು ಎಂದು ಒತ್ತಾಯಿಸಿದರು.

ಎಐಡಿಎಸ್‌ಒ ಜಿಲ್ಲಾಧ್ಯಕ್ಷ ರವಿಕಿರಣ್ ಮಾತನಾಡಿ, ಕೇಂದ್ರ ಚುನಾವಣಾ ಆಯೋಗ ಎಸ್‌ಐಆರ್ ಹೆಸರಲ್ಲಿ ದಲಿತರು, ಹಿಂದುಳಿದವರು ಹಾಗೂ ಅಲ್ಪಸಂಖ್ಯಾತರನ್ನು ಮತದಾರರ ಪಟ್ಟಿಯಿಂದ ಕೈಬಿಡಲು ಹೊರಟಿದೆ. ಇದನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದರು.

ನಂತರ ಬೇಡಿಕೆಗಳ ಮನವಿ ಪತ್ರವನ್ನು ತಹಶೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಪ್ರತಿಭಟನಾಕಾರರು ಎಸ್‌ಐಆರ್ ರದ್ದುಗೊಳಿಸಬೇಕು ಹಾಗೂ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ವಜಾ ಮಾಡಬೇಕು ಎಂದು ಘೋಷಣೆ ಕೂಗಿದರು.

ಪ್ರತಿಭಟನೆಯಲ್ಲಿ ಎಐಡಿಎಸ್‌ಒ ಜಿಲ್ಲಾ ಕಾರ್ಯದರ್ಶಿ ಯು. ಉಮಾದೇವಿ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಶಿವರೆಡ್ಡಿ, ಶ್ರೀನಿವಾಸ, ಸಮೀರ್, ಶಿವಮ್ಮ, ಜಾಗೃತ ನಾಯಕ ಬಳಗದ ಗೌರವಾಧ್ಯಕ್ಷ ದುರುಗಪ್ಪ ಪೂಜಾರಿ, ಹಿರಿಯ ಸದಸ್ಯ ಆಂಜನೇಯ ಸೇರಿದಂತೆ ವಿದ್ಯಾರ್ಥಿ, ಯುವಜನರು ಭಾಗವಹಿಸಿದ್ದರು.

# ಹಂಪಿ ತುಂಗಭದ್ರಾ ದಡದಲ್ಲಿ ಪಿತೃಪಕ್ಷದ ತರ್ಪಣ





**ಹೊಸಪೇಟೆ ಧ್ವನಿ ನ್ಯೂಸ್ :**

**ಹೊಸಪೇಟೆ(ಹಂಪಿ):** ಪಿತೃಪಕ್ಷದ ಹಿನ್ನೆಲೆಯಲ್ಲಿ ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕಿನ ಹಂಪಿಯ ತುಂಗಭದ್ರಾ ನದಿ ದಡದಲ್ಲಿ ಶುಕ್ರವಾರ ಪೂರ್ವಜರನ್ನು ಸ್ಮರಿಸುವ ಧಾರ್ಮಿಕ ವಿಧಿವಿಧಾನಗಳು ಜರುಗಿದವು.

ಪೂರ್ವಜರಿಗೆ ಗೌರವ ಸಲ್ಲಿಸುವ ಸಂಪ್ರದಾಯದ ಅಂಗವಾಗಿ ಪಿತೃ ತರ್ಪಣ, ಪ್ರಾರ್ಥನೆ ಸೇರಿದಂತೆ ವಿವಿಧ ಧಾರ್ಮಿಕ ಆಚರಣೆಗಳಿಗೆ ಈ ಸಂದರ್ಭದಲ್ಲಿ ಮಹತ್ವ ನೀಡಲಾಯಿತು.

ಹಂಪಿಯ ತುಂಗಭದ್ರಾ ನದಿ ದಡದ ಧಾರ್ಮಿಕ ವಿಧಿವಿಧಾನ ಮಂಟಪದಲ್ಲಿ ಹಂಪಿ ಪುರೋಹಿತರಿಂದ ನಡೆದ ಪೂಜಾ ವಿಧಿವಿಧಾನದ ಮೂಲಕ ಭಕ್ತರು ತಮ್ಮ ಪಿತೃಗಳಿಗೆ ತರ್ಪಣ ಅರ್ಪಿಸಿದರು.

ಪಿತೃಪಕ್ಷವು ಪೂರ್ವಜರನ್ನು ಸ್ಮರಿಸಿ ಅವರಿಗೆ ಕೃತಜ್ಞತೆ ಸಲ್ಲಿಸುವ ಪವಿತ್ರ ಕಾಲವೆಂದು ಹಿಂದೂ ಧಾರ್ಮಿಕ ಪರಂಪರೆಯಲ್ಲಿ ನಂಬಲಾಗಿದೆ. ಧಾರ್ಮಿಕ ಮಹತ್ವ ಹೊಂದಿರುವ ಹಂಪಿಯ ತುಂಗಭದ್ರಾ ನದಿ ತೀರವು ಭಕ್ತರ ಪಾಲಿಗೆ ವಿಶೇಷ ಸ್ಥಾನ ಪಡೆದಿದೆ.

# ಮೂರು ವರ್ಷ ಕಳೆದರೂ ಪೂರ್ಣಗೊಳ್ಳದ ಅಂಗನವಾಡಿ ಕಟ್ಟಡ

## ಪುಟಾಣಿಗಳ ಪರದಾಟ, ಅನೈತಿಕ ಚಟುವಟಿಕೆಗಳ ಅಡ್ಡೆಯಾದ ಅರೆಬರೆ ಕಟ್ಟಡ

**ಹೊಸಪೇಟೆ ಧ್ವನಿ ನ್ಯೂಸ್ :**

**ಹಗರಿಬೊಮ್ಮನಹಳ್ಳಿ :** ವಿಜಯನಗರ ಜಿಲ್ಲೆ ಹಗರಿಬೊಮ್ಮನಹಳ್ಳಿ ತಾಲೂಕಿನ ಉಪ್ಪಾರಗಟ್ಟಿ ಗ್ರಾಮದಲ್ಲಿ ನೂತನ ಅಂಗನವಾಡಿ ಕೇಂದ್ರದ ಕಟ್ಟಡ ಕಾಮಗಾರಿ ಆರಂಭವಾಗಿ ಮೂರು ವರ್ಷ ಕಳೆದರೂ ಇಂದಿಗೂ ಪೂರ್ಣಗೊಳ್ಳದೆ ಅರೆಬರೆಯಾಗಿ ನಿಂತಿದೆ. ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ನಿರ್ಲಕ್ಷ್ಯದಿಂದ ಮಕ್ಕಳಿಗೆ ಸೂಕ್ತ ಸೂರು ಸಿಗದೆ ಪರದಾಡುವಂತಾಗಿದೆ.

**ಶಾಲಾ ಕೊಠಡಿಯಲ್ಲೇ ಅಂಗನವಾಡಿ: ಕಲಿಕೆಗೆ ಅಡಚಣೆ**

ಸ್ವಂತ ಕಟ್ಟಡದ ಕಾಮಗಾರಿ ಅರ್ಧಕ್ಕೆ ನಿಂತಿರುವುದರಿಂದ ಪುಟಾಣಿಗಳನ್ನು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೊಠಡಿಯಲ್ಲಿ ಕೂರಿಸಿ ಪಾಠ, ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಒಂದೇ ಆವರಣದಲ್ಲಿ ಅಂಗನವಾಡಿ ಹಾಗೂ ಶಾಲಾ ತರಗತಿಗಳು ನಡೆಯುತ್ತಿರುವುದರಿಂದ ಪ್ರಾಥಮಿಕ ಶಾಲಾ ಮಕ್ಕಳ ಕಲಿಕೆಗೆ ತೀವ್ರ ತೊಂದ–ರೆಯಾಗುತ್ತಿದೆ. ಚಿಕ್ಕ ಮಕ್ಕಳ ಕಲರವದಿಂದ ತರಗತಿ ನಿರ್ವಹಣೆಗೆ ನಿತ್ಯ ಅಡಚಣೆಯಾಗುತ್ತಿದ್ದರೂ ಅಧಿಕಾರಿಗಳು ಜಾಣಕುರುಡು ಪ್ರದರ್ಶಿಸುತ್ತಿದ್ದಾರೆ.



ಹಗರಿಬೊಮ್ಮನಹಳ್ಳಿ ತಾಲೂಕಿನ ಉಪ್ಪಾರಗಟ್ಟಿ ಗ್ರಾಮದ ಅಂಗನವಾಡಿ ಕಟ್ಟಡ ಕಾಮಗಾರಿಯಲ್ಲಿ ಸಣ್ಣಪುಟ್ಟ ಕೆಲಸಗಳಿದ್ದು, ಈ ತಿಂಗಳಲ್ಲಿ ಎಲ್ಲಾ ಕೆಲಸಗಳನ್ನು ಮುಗಿಸಿ ಉದ್ಘಾಟನೆಗೆ ಸಿದ್ದತೆ ಮಾಡಿಕೊಳ್ಳಲಾಗುವುದು.

– **ನಾಗಭೂಷಣ್,**
ಸಿಡಿಪಿಓ, ಹಗರಿಬೊಮ್ಮನಹಳ್ಳಿ.

**ಅನೈತಿಕ ಚಟುವಟಿಕೆಗಳ ಅಡ್ಡೆ**

ಅರ್ಧಕ್ಕೆ ನಿಂತಿರುವ ಕಟ್ಟಡವು ಸದ್ಯ ಪುಂಡ–ಪೋಕರಿಗಳು ಹಾಗೂ ಕುಡುಕರ ತಾಣವಾಗಿ ಮಾರ್ಪಟ್ಟಿದೆ. ಕಿಟಕಿ, ಬಾಗಿಲುಗಳಿಲ್ಲದೆ ಪಾಳುಬಿದ್ದಂತಿರುವ ಈ ಜಾಗದಲ್ಲಿ ಸಂಜೆ–ಯಾಗುತ್ತಿದ್ದಂತೆ ಮದ್ಯಪಾನ, ಪುಟ– 3

# ಭಾರತ ಸಂಗೀತ ಲೋಕದ ಗಾಯತ್ರಿ ವೀಣೆ ವೈಕೋಮ್ ವಿಜಯಲಕ್ಷ್ಮಿ

ಸಂಗೀತದ ಅನಂತ ಲೋಕದಲ್ಲಿ ದೃಷ್ಟಿಯ ಅಡಚಣೆಯನ್ನು ಸವಾಲಾಗಿ ಸ್ವೀಕರಿಸಿ, ದೃಢಸಂಕಲ್ಪ ಮತ್ತು ಕಠಿಣ ಪರಿಶ್ರಮದಿಂದ ಅಸಾಧ್ಯವಾದುದನ್ನು ಸಾಧಿಸಿ ತೋರಿಸಿದ ಪ್ರಸಿದ್ಧ ಗಾಯಕಿ *ವೈಕೋಮ್ ವಿಜಯಲಕ್ಷ್ಮಿ* ಅವರ ಜೀವನ ಪಯಣ ಸಂಗೀತ ಪ್ರಪಂಚಕ್ಕೆ ಮಾತ್ರವಲ್ಲದೆ ಪ್ರತಿಯೊಬ್ಬ ಮನುಷ್ಯನಿಗೂ ಒಂದು ಅತ್ಯಂತ ಸ್ಫೂರ್ತಿದಾಯಕ ಹಾಗೂ ಭಾವನಾತ್ಮಕ ಕಥೆಯಾಗಿದೆ.

72 ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಯಲ್ಲಿ ಮಲಯಾಳಂನ ಬಹುನಿರೀಕ್ಷಿತ 'ARM' (ಅಜಯಂತೆ ರಂಡಮ್ ಮೋಷಣಂ) ಚಿತ್ರದ *"ಅಂಗು ವಾನ ಕೊನಿಲು"* ಹಾಡಿಗಾಗಿ ಅತ್ಯುತ್ತಮ ಮಹಿಳಾ ಹಿನ್ನೆಲೆ ಗಾಯಕಿಯಾಗಿ ಗೌರವಿಸಲ್ಪಟ್ಟಿರುವ ಇವರ ಯಶೋಗಾಥೆಯು ಕಠಿಣ ತಪಸ್ಸು ಮತ್ತು ಸಾಧನೆಯ ಸುಂದರ ಸಂಗಮವಾಗಿದೆ.

**ದೃಷ್ಟಿಯ ಮಿತಿಯನ್ನು ಮೀರಿ ಬೆಳೆದ ನಾದದ ಜಗತ್ತು**

ಅಕ್ಟೋಬರ್ 7, 1981 ರಂದು ವಿಜಯದಶಮಿಯ ಪವಿತ್ರ ದಿನದಂದು ಕೇರಳದ ವೈಕೋಮ್‌ನಲ್ಲಿ ಜನಿಸಿದ ವೈಕೋಮ್ ವಿಜಯಲಕ್ಷ್ಮಿ ಅವರು ಹುಟ್ಟಿನಿಂದಲೇ ದೃಷ್ಟಿಹೀನರಾಗಿದ್ದರೂ, ಸಂಗೀತವೇ ತಮಗೆ ದೃಷ್ಟಿಗಿಂತ ಸುಂದರವಾದ ಜಗತ್ತನ್ನು ನೀಡಿದೆ ಎಂದು ಆಳವಾಗಿ ನಂಬುತ್ತಾರೆ. ಸಾಮಾನ್ಯ ದೃಷ್ಟಿಗಿಂತ ಆಂತರಿಕ ದೃಷ್ಟಿ ಮತ್ತು ಹೃದಯದ ಧ್ವನಿ ಎಷ್ಟು ಶಕ್ತಿಶಾಲಿ ಎಂಬುದನ್ನು ಇವರ ಬದುಕು ನಿರೂಪಿಸುತ್ತದೆ.

ಕೇವಲಒಂದೂವರೆವರ್ಷದಹಸುಗೂಸಿದ್ದಾಗಿನಿಂದಲೇ ತಮಿಳಿನ ಪ್ರಸಿದ್ಧ ಚಿತ್ರಗೀತೆಗಳನ್ನು ಗುನುಗಲು ಯತ್ನಿಸುತ್ತಿದ್ದ ಇವರ ಪ್ರತಿಭೆಯನ್ನು ಗುರುತಿಸಿ ಬೆಳೆಸಿದವರು ಇವರ ತಾಯಿ ಮತ್ತು ತಂದೆ. "ನನ್ನ ತಾಯಿ ಮತ್ತು ತಂದೆ ನನ್ನ ಎರಡು ಕಣ್ಣುಗಳು. ಅವರು ನನ್ನನ್ನು ರೆಕಾರ್ಡಿಂಗ್ ಸ್ಟುಡಿಯೋಗಳಿಗೆ ಕರೆದೊಯ್ಯುತ್ತಾ, ನನ್ನ ಹಾಡುಗಳನ್ನು ಕಲಿಯಲು ಸದಾ ಬೆನ್ನೆಲುಬಾಗಿ ನಿಂತರು" ಎಂದು ವಿಜಯಲಕ್ಷ್ಮಿ ಅವರು ತಮ್ಮ ಹೆತ್ತವರ ತ್ಯಾಗವನ್ನು ಕೃತಜ್ಞತೆಯಿಂದ ಸ್ಮರಿಸುತ್ತಾರೆ. ಬೆಳಿಗ್ಗೆ ಮೂರು ಗಂಟೆಗೇ ಎದ್ದು ಮಗಳ ಅಭ್ಯಾಸಕ್ಕಾಗಿ ಸೈಕಲ್‌ನಲ್ಲಿ ಸಂಗೀತ ತರಗತಿಗೆ ಕರೆದೊಯ್ಯುತ್ತಿದ್ದ ತಂದೆಯ ಶಿಸ್ತು ಇವರ ಇಂದಿನ ಯಶಸ್ಸಿನ ಭದ್ರವಾದ ಅಡಿಪಾಯ.

**ಬಾಲಕಿಯ ವೀಣಾ ಸಾಧನೆ ಮತ್ತು ರಂಗಪ್ರವೇಶ**

ಐದೂವರೆ ವಯಸ್ಸಿನಲ್ಲಿ ವೈಕಂನ ಉದಯನಪುರಂ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಪ್ರಸಿದ್ಧ ಗಾಯಕ ಕೆ. ಜೆ. ಯೇಸುದಾಸ್ ಅವರಿಗೆ ಗುರುದಕ್ಷಿಣೆ ನೀಡಿ ತಮ್ಮ ಸಂಗೀತ ರಂಗಪ್ರವೇಶವನ್ನು ಆರಂಭಿಸಿದ ಇವರು, ಬಾಲ್ಯದಿಂದಲೂ ಸಂಗೀತವನ್ನೇ ತಮ್ಮ ಸರ್ವಸ್ವವನ್ನಾಗಿ ಸ್ವೀಕರಿಸಿದರು.

ಆಟಿಕೆ ಪ್ಲಾಸ್ಟಿಕ್ ಬಾಟಲಿ ಮತ್ತು ಒಂದೇ ದಾರವನ್ನು ಬಳಸಿ ತಯಾರಿಸಿದ ವೀಣೆಯಿಂದ ಸ್ವರಗಳನ್ನು ಅಭ್ಯಾಸ ಮಾಡಿದ್ದ ಇವರು, ಮುಂದೆ ಅದೇ ಏಕತಂತಿಯ ಅಪರೂಪದ ವಾದ್ಯವಾದ *'ಗಾಯತ್ರೀವೀಣೆ*'** ನುಡಿಸುವುದರಲ್ಲಿ ನಿಪುಣರಾದರು. ಈ ವಾದ್ಯವನ್ನು ನಿರಂತರವಾಗಿ ಆರೂವರೆ ಗಂಟೆಗಳ ಕಾಲ ನುಡಿಸುವ ಮೂಲಕ ಇವರು ವಿಶ್ವ




ದಾಖಲೆಯನ್ನೂ ನಿರ್ಮಿಸಿದ್ದಾರೆ.

ಸಿನಿರಂಗದ ಸುವರ್ಣ ಮೈಲಿಗಲ್ಲುಗಳು

**ಚೊಚ್ಚಲ ಪ್ರವೇಶ ಹಾಗೂ ವಿಶೇಷ ಉಲ್ಲೇಖ :**

ಕಮಲ್ ನಿರ್ದೇಶನದ ಮಲಯಾಳಂ ಚಲನಚಿತ್ರ 'ಸೆಲ್ಯುಲಾಯ್ಡ್' ಚಿತ್ರದ "ಕಾಟ್ಟೇ ಕಾಟ್ಟೇ..." ಹಾಡಿನ ಮೂಲಕ ಹಿನ್ನೆಲೆ ಗಾಯಕಿಯಾಗಿ ಸಿನಿರಂಗ ಪ್ರವೇಶಿಸಿದ ಇವರು, ಮೊದಲ ಚಿತ್ರದಲ್ಲೇ ಕೇರಳ ರಾಜ್ಯ ಚಲನಚಿತ್ರ ಪ್ರಶಸ್ತಿಯ 'ವಿಶೇಷ ತೀರ್ಪುಗಾರರ ಉಲ್ಲೇಖ' (Special Jury Mention) ಪಡೆದರು. ಖ್ಯಾತ ಸಂಗೀತ ನಿರ್ದೇಶಕ ಎಂ. ಜಯಚಂದ್ರನ್ ಅವರು ಇವರ ಧ್ವನಿಯನ್ನು ದಂತಕಥೆ ಎಂ.ಎಸ್. ಸುಬ್ಬುಲಕ್ಷ್ಮಿ ಅವರ ಧ್ವನಿಯೊಂದಿಗೆ ಹೋಲಿಸಿ ಪ್ರಶಂಸಿಸಿದ್ದರು.

ವಿವಿಧ ಭಾಷೆಗಳಲ್ಲಿ ಯಶಸ್ಸು: ಮಲಯಾಳಂ ಮಾತ್ರವಲ್ಲದೆ ತಮಿಳು (ವಿಜಯ್ ಅವರ 'ಥೇರಿ' ಚಿತ್ರದ ಸಂಸ್ಕೃತ ಪದ್ಯಗಳು, 'ಕುಕೂ' ಚಿತ್ರದ ಹಾಡುಗಳು) ಹಾಗೂ ತೆಲುಗು ಭಾಷೆಗಳಲ್ಲೂ ತಮ್ಮ ಗಾಯನದಿಂದ ಸೈ ಎನಿಸಿಕೊಂಡಿದ್ದಾರೆ. ಬಾಹುಬಲಿ ಚಿತ್ರದ ತಮಿಳು ಮತ್ತು ಮಲಯಾಳಂ ಆವೃತ್ತಿಗಳಿಗೂ ಎಂ.ಎಂ. ಕೀರವಾಣಿ ಅವರ ನಿರ್ದೇಶನದಲ್ಲಿ ಹಾಡಿ ಮೆಚ್ಚುಗೆ ಗಳಿಸಿದ್ದಾರೆ. ಕನ್ನಡದ 'ಜುಗಲ್ ಬಂದಿ' ಚಿತ್ರಕ್ಕೂ ಇವರು ಧ್ವನಿಗೂಡಿಸಿದ್ದಾರೆ.

**ಪ್ರಮುಖ ಗೌರವಗಳು :**

ಸಂಗೀತ ಲೋಕದ ಇವರ ಅನನ್ಯ ಸೇವೆಗಾಗಿ 2022 ರಲ್ಲಿ ಕೇರಳ ಸರ್ಕಾರವು ತನ್ನ ಮೂರನೇ ಅತ್ಯುನ್ನತ ನಾಗರಿಕ ಗೌರವವಾದ **'ಕೇರಳ ಶ್ರೀ' ಪ್ರಶಸ್ತಿ ನೀಡಿ ಗೌರವಿಸಿದೆ.

**ರಾಷ್ಟ್ರೀಯ ಪ್ರಶಸ್ತಿಯ ಸಂಭ್ರಮ ಹಾಗೂ ಮಧುರ ಅನುಭವ**

ರಾಷ್ಟ್ರ ಪ್ರಶಸ್ತಿ ಗೆಲ್ಲುವುದು ನನ್ನ ಕನಸಾಗಿತ್ತು. ಈ ಹಾಡನ್ನು ಮೊದಲು ಕೇಳಿದ ನನ್ನ ಸಂಬಂಧಿ ವೇಣು ಮಾಮಾ ಮತ್ತು ನನ್ನ ಆಧ್ಯಾತ್ಮಿಕ ಗುರುಗಳು ನನಗೆ ಈ ಪ್ರಶಸ್ತಿ ಸಿಗಲಿದೆ ಎಂದು ಮೊದಲೇ ಭವಿಷ್ಯ ನುಡಿದಿದ್ದರು" ಎಂದು ವಿಜಯಲಕ್ಷ್ಮಿ ಹರ್ಷ ವ್ಯಕ್ತಪಡಿಸುತ್ತಾರೆ.

ಮಲಯಾಳಂನ 'ಂಖಒ' ಚಿತ್ರಕ್ಕಾಗಿ ಡಿಬು ನಿನಾನ್ ಥಾಮಸ್ ಸಂಗೀತ ಸಂಯೋಜನೆಯಲ್ಲಿ ಮೂಡಿಬಂದ "ಅಂಗು ವಾನ ಕೊನಿಲು" ಗೀತೆಯನ್ನು ಕೇವಲ ಒಂದು ಗಂಟೆಯೊಳಗೆ ಅತ್ಯಂತ ಲೀಲಾಜಾಲವಾಗಿ ರೆಕಾರ್ಡ್ ಮಾಡಿದ ಇವರ ಪ್ರತಿಭೆ ಎಲ್ಲರ ಹುಬ್ಬೇರುವಂತೆ ಮಾಡಿದೆ. ಪ್ರಶಸ್ತಿ ಘೋಷಣೆಯಾದ ಆ ದಿನ ಮಮ್ಮುಟ್ಟಿ ಸೇರಿದಂತೆ ಚಿತ್ರರಂಗದ ದಿಗ್ಗಜರು ಕರೆ ಮಾಡಿ ಅಭಿನಂದಿಸಿದ ಕ್ಷಣಗಳನ್ನು ಅವರು ತಮ್ಮ ಜೀವನದ ಅತ್ಯಂತ ಸಂತೋಷದ ಕ್ಷಣಗಳೆಂದು ಬಣ್ಣಿಸುತ್ತಾರೆ.

**ಬದುಕಿನ ಸಂದೇಶ**

ಸಂಗೀತದ ಮೇಲಿನ ಅಚಲ ಪ್ರೀತಿ, ಸಕಾರಾತ್ಮಕ ಮನೋಭಾವ ಮತ್ತು ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ನಗುತ್ತಾ ಮುನ್ನಡೆಯುವ ಇವರ ಸ್ವಭಾವವು ಪ್ರತಿಯೊಬ್ಬರಿಗೂ ದೊಡ್ಡ ಸ್ಫೂರ್ತಿ. ಯಾವುದೇ ಕಷ್ಟದ ಪರಿಸ್ಥಿತಿಯಲ್ಲೂ ಧೃತಿಗೆಡದೆ, ತನ್ನ ಆಂತರಿಕ ಶಕ್ತಿಯಿಂದ ಇಡೀ ಸಂಗೀತ ಲೋಕವನ್ನೇ ಬೆಳಗುತ್ತಿರುವ ವೈಕೋಮ್ ವಿಜಯಲಕ್ಷ್ಮಿ ಅವರ ಈ ಸಾಧನೆಯ ಹಾದಿ ಸದಾ ದಾರಿದೀಪವಾಗಿದೆ.



**–ಡಾ. ಪ್ರಸನ್ನ ದೇವರ ಮಠ ಅನಿಲಕುಮಾರ್, ಮಾಗಳ**
ಪದವೀಧರ ಪ್ರಾಥಮಿಕ ಶಿಕ್ಷಕರು
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ,
ಮುದೇನೂರು,
ಹೂವಿನಹಡಗಲಿ, ವಿಜಯನಗರ ಜಿಲ್ಲೆ

## 'ಗವರ್ನ್‌ಮೆಂಟ್ ಫಸ್ಟ್' ಯೋಜನೆಯಡಿ ಸ್ಟಾರ್ಟ್‌ಅಪ್‌ಗಳಿಂದ ಅರ್ಜಿ ಆಹ್ವಾನ; 25 ಲಕ್ಷ ರೂಪಾಯಿಯ ಕಾರ್ಯಾದೇಶ ಪಡೆಯುವ ಅವಕಾಶ

**ಬೆಂಗಳೂರು:** ಕರ್ನಾಟಕ ಸರ್ಕಾರವು ತನ್ನ 'ಗವರ್ನ್‌ಮೆಂಟ್ ಫಸ್ಟ್' ಯೋಜನೆಯಡಿ ಅರ್ಜಿ ಆಹ್ವಾನಿಸಿದೆ. ಸರ್ಕಾರಿ ಇಲಾಖೆಗಳು ಗುರುತಿಸಿರುವ ಸವಾಲುಗಳಿಗೆ ಪರಿಹಾರ ಹೊಂದಿರುವ ಕರ್ನಾಟಕ ಮೂಲದ ಸ್ಟಾರ್ಟ್‌ಅಪ್‌ಗಳು ಅರ್ಜಿ ಸಲ್ಲಿಸಬಹುದು. ಮೊದಲ ಆಹ್ವಾನವು ಎರಡು ಪ್ರಮುಖ ಕ್ಷೇತ್ರಗಳ ಮೇಲೆ ಗಮನಹರಿಸುತ್ತದೆ– ಪ್ರಜಾ ಸೇವೆ ಮೂಲಕ ನಾಗರಿಕ ಕೇಂದ್ರಿತ ಆಡಳಿತವನ್ನು ಮರುರೂಪಿಸುವುದು ಹಾಗೂ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಮೂಲಕ ನಗರ ನೀರು ನಿರ್ವಹಣೆಯನ್ನು ಪರಿವರ್ತಿಸುವುದು. ಆಯ್ಕೆಯಾಗುವ ಸ್ಟಾರ್ಟ್‌ಅಪ್‌ಗಳಿಗೆ ತಮ್ಮ ಪರಿಹಾರಗಳನ್ನು ಪ್ರದರ್ಶಿಸಿ ಅನುಷ್ಠಾನಗೊಳಿಸುವ ಅವಕಾಶ ದೊರೆಯಲಿದ್ದು, 25 ಲಕ್ಷ ರೂ.ವರೆಗೆ ಕಾರ್ಯಾದೇಶ ನೀಡಲಾಗುತ್ತದೆ.

ಗವರ್ನ್‌ಮೆಂಟ್ ಫಸ್ಟ್' ಉಪಕ್ರಮದ ಉದ್ದೇಶ, ನೈಜ ಸರ್ಕಾರಿ ಅಗತ್ಯಗಳಿಗೆ ಪರಿಹಾರ ರೂಪಿಸಿ, ಅವುಗಳನ್ನು ಸರ್ಕಾರಿ ಪ್ಲ್ಯಾಟ್‌ಫಾರ್ಮ್‌ನಲ್ಲಿಯೇ ಪರೀಕ್ಷಿಸಲು ಸ್ಟಾರ್ಟ್‌ಅಪ್‌ಗಳಿಗೆ ಅವಕಾಶ ಕಲ್ಪಿಸುವುದಾಗಿದೆ. ಯಶಸ್ವಿಯಾಗುವ ಪರಿಹಾರಗಳಿಗೆ ಮುಂದಿನ ಹಂತದಲ್ಲಿ ಹೆಚ್ಚಿನ ಅನುಷ್ಠಾನ ಮತ್ತು ಖರೀದಿಗೆ ಅವಕಾಶ ದೊರೆಯಲಿದೆ. ಕರ್ನಾಟಕ ಸ್ಟಾರ್ಟ್‌ಅಪ್ ನೀತಿ 2025–30ರ ಅಡಿಯಲ್ಲಿ ಜಾರಿಗೊಳ್ಳುತ್ತಿರುವ ಈ ಯೋಜನೆಯು ನವೀನ ಪರಿಹಾರಗಳಿಗೆ ಸರ್ಕಾರವನ್ನು ಆರಂಭಿಕ ಗ್ರಾಹಕರನ್ನಾಗಿ ರೂಪಿಸುವುದರ ಜತೆಗೆ, ಸ್ಟಾರ್ಟ್‌ಅಪ್‌ಗಳಿಗೆ ಮಾರುಕಟ್ಟೆ ಅವಕಾಶಗಳನ್ನು ಸೃಷ್ಟಿಸುವ ಗುರಿಯನ್ನು ಹೊಂದಿದೆ.

ಗೃಹ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ಇ–ಆಡಳಿತ ಇಲಾಖೆಯ ಸಚಿವ ಪ್ರಿಯಾಂಕ್ ಖರ್ಗೆ ಮಾತನಾಡಿ, ಗವರ್ನ್‌ಮೆಂಟ್ ಫಸ್ಟ್ ಉಪಕ್ರಮವು ಆಡಳಿತ ಮತ್ತು ಸಾರ್ವಜನಿಕ ಸೇವಾ ವಿತರಣೆಯಲ್ಲಿ ನವೀನತೆಯಿಂದ ಚಾಲಿತ ಪರಿಹಾರಗಳನ್ನು ಉತ್ತೇಜಿಸಲು ಸ್ಟಾರ್ಟ್‌ಅಪ್ ಸ್ನೇಹಿ ಖರೀದಿ ವ್ಯವಸ್ಥೆಯನ್ನು ಪರಿಚಯಿಸುವ ಉದ್ದೇಶವನ್ನು ಹೊಂದಿದೆ. ಸ್ಟಾರ್ಟ್‌ಅಪ್‌ಗಳಿಗೆ ಪ್ರಾಯೋಗಿಕ ಅನುಷ್ಠಾನದ ಅವಕಾಶಗಳನ್ನು ಒದಗಿಸುವುದು ನಮ್ಮ ಉದ್ದೇಶ. ಈ ಮೊದಲ ಆಹ್ವಾನದ ಮೂಲಕ ನಾವು ಸರ್ಕಾರಿ ವ್ಯವಸ್ಥೆಯಲ್ಲಿರುವ ಸಮಸ್ಯೆಗಳನ್ನು ಸ್ಟಾರ್ಟ್‌ಅಪ್ ಪರಿಸರದ ಮುಂದಿಡುತ್ತಿದ್ದು, ನೈಜ ಪರಿಸ್ಥಿತಿಗಳಲ್ಲಿ ತಮ್ಮ ಪರಿಹಾರಗಳನ್ನು ಪ್ರದರ್ಶಿಸಲು ನವೋದ್ಯಮಿಗಳನ್ನು ಆಹ್ವಾನಿಸುತ್ತಿದ್ದೇವೆ.

ಗವರ್ನ್‌ಮೆಂಟ್ ಫಸ್ಟ್ ಮೂಲಕ ಸರ್ಕಾರವೇ ನವೀನ ಸ್ಟಾರ್ಟ್‌ಅಪ್‌ಗಳಿಗೆ ಮೊದಲ ಗ್ರಾಹಕರಾಗಬಹುದು. ಇದರಿಂದ ಕರ್ನಾಟಕದ ಸ್ಟಾರ್ಟ್‌ಅಪ್ ಪರಿಸರವು ನೈಜ ಸಾರ್ವಜನಿಕ ವಲಯದ ಸವಾಲುಗಳಿಗೆ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಅವಕಾಶ ಸಿಗುತ್ತದೆ ಎಂದು ತಿಳಿಸಿದ್ದಾರೆ.

## ಇನ್‌ಸ್ಟಾಗ್ರಾಮ್‌ನಲ್ಲಿ ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿ ಜತೆ ಚಾಟ್: ಮನೆಗೆ ಭೇಟಿ ನೀಡಿ ಲೈಂಗಿಕ ದೌರ್ಜನ್ಯ ಎಸಗಿದ ಕಾಮುಕ ಶಿಕ್ಷಕ

**ಚೆನ್ನೈ:** ಶಾಲಾ ಶಿಕ್ಷಕನೊಬ್ಬ ಇನ್‌ಸ್ಟಾಗ್ರಾಮ್‌ನಲ್ಲಿ ವಿದ್ಯಾರ್ಥಿನಿಯೊಬ್ಬಳೊಂದಿಗೆ ಸಂಪರ್ಕ ಸಾಧಿಸಿ ಲೈಂಗಿಕ ದೌರ್ಜನ್ಯ ಎಸಗಿರುವ ಆಘಾತಕಾರಿ ಘಟನೆ ನಡೆದಿದೆ. ಸದ್ಯ ಆತನನ್ನು ಪೊಲೀಸರು ಬಂಧಿಸಿದ್ದಾರೆ. ತಮಿಳುನಾಡಿನ ಧರ್ಮಪುರಿ ಜಿಲ್ಲೆಯಲ್ಲಿ ಘಟನೆ ನಡೆದಿದೆ. ಈ ಪ್ರಕರಣವು ಮಕ್ಕಳ ಸಾಮಾಜಿಕ ಮಾಧ್ಯಮ ಪ್ರವೇಶದ ಬಗ್ಗೆ ಮತ್ತೊಮ್ಮೆ ಕಳವಳವನ್ನು ಹುಟ್ಟುಹಾಕಿದೆ. ಖಾಸಗಿ ಶಾಲೆಯಲ್ಲಿ ಪಾಠ ಮಾಡುವ ಶಿಕ್ಷಕ, ಇನ್‌ಸ್ಟಾಗ್ರಾಮ್ ಮೂಲಕ ವಿದ್ಯಾರ್ಥಿನಿಯ ಸಂಪರ್ಕ ಬೆಳೆಸಿದ್ದಾನೆ.

ವಿದ್ಯಾರ್ಥಿನಿಗೆ ಆಮಿಷವೊಡ್ಡಿ ಮನೆಗೆ ಕರೆಸಿ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ ಎಂದು ಆರೋಪಿಸಲಾಗಿದೆ. ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯ್ದೆಯಡಿ ಶಿಕ್ಷಕನನ್ನು ಬಂಧಿಸಲಾಗಿದೆ. ಈ ಘಟನೆ ಯಾವಾಗಿನಿಂದ ನಡೆಯುತ್ತಿತ್ತು ಎಂಬುದರ ಕುರಿತು ನಾವು ತನಿಖೆ ನಡೆಸುತ್ತಿದ್ದೇವೆ. ವಿದ್ಯಾರ್ಥಿನಿ ಅಪ್ರಾಪ್ತ ವಯಸ್ಕಳಾಗಿರುವುದರಿಂದ, ಇದು ಕಾನೂನು ಉಲ್ಲಂಘನೆಯ ಪ್ರಕರಣವಾಗಿದೆ. ಇಲ್ಲಿ ಸಮ್ಮತಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಈ ಪ್ರಕರಣದ ಬಳಿಕ, ಭಾರತದಲ್ಲಿನ ಮಕ್ಕಳ ಹಕ್ಕುಗಳ ಹೋರಾಟಗಾರರು ಸಾಮಾಜಿಕ ಮಾಧ್ಯಮ ವೇದಿಕೆಗಳನ್ನು ಬಳಸುವ ಮಕ್ಕಳಿಗೆ ವಯೋಮಿತಿ ಮತ್ತು ಪೋಷಕರ ನಿಯಂತ್ರಣ ಸೇರಿ ಮತ್ತಷ್ಟು ಬಲವಾದ ಸುರಕ್ಷತಾ ಕ್ರಮಗಳನ್ನು ಜಾರಿಗೆ ತರಬೇಕೆಂದು ಆಗ್ರಹಿಸಿದ್ದಾರೆ. ಮಕ್ಕಳಿಗೆ ವಯಸ್ಸಿಗೆ ಅನುಗುಣವಾದ ನಿರ್ಬಂಧಗಳು ಮತ್ತು ಸಾಮಾಜಿಕ ಮಾಧ್ಯಮವನ್ನು ಸುರಕ್ಷಿತವಾಗಿ ಬಳಸುವ ನಿಯಮದ ಅಗತ್ಯವಿದೆ ಎಂದು ಹೇಳಿದ್ದಾರೆ.

# ಕೆ ಸೆಟ್ ಪರೀಕ್ಷೆಯನ್ನು ಪಾರದರ್ಶಕವಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳಿ : ಜಿಲ್ಲಾಧಿಕಾರಿ ಗಂಗಾಧರಸ್ವಾಮಿ

**ದಾವಣಗೆರೆ :** ಕರ್ನಾಟಕ ರಾಜ್ಯದ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆ (KSET–2026) ಯನ್ನು ಅತ್ಯಂತ ಪಾರದರ್ಶಕ, ನ್ಯಾಯೋಚಿತ ಹಾಗೂ ದೋಷರಹಿತವಾಗಿ ನಡೆಸಲು ಅಗತ್ಯ ಸಿದ್ಧತೆಗಳನ್ನ ಕೈಗೊಳ್ಳಿ ಎಂದು ಜಿಲ್ಲಾಧಿಕಾರಿ ಗಂಗಾಧರ ಸ್ವಾಮಿ ಜಿ. ಎಂ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಗುರುವಾರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಕೆ ಸೆಟ್ ಪರೀಕ್ಷೆಯ ಪೂರ್ವ ಭಾವಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಅಕ್ಟೋಬರ್ 11, ಭಾನುವಾರ ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಏಇಂ) ವತಿಯಿಂದ ದಾವಣಗೆರೆ ಜಿಲ್ಲೆಯಾದ್ಯಂತ 19 ಪರೀಕ್ಷಾ ಕೇಂದ್ರಗಳಲ್ಲಿ ಒಟ್ಟು 9012 ಅಭ್ಯರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ, ಪರೀಕ್ಷೆಯು ಎರಡು ಪ್ರಶ್ನೆಪತ್ರಿಕೆ ಗಳನ್ನ ಒಳಗೊಂಡಿದ್ದು ಪತ್ರಿಕೆ–1 : 50 ಪ್ರಶ್ನೆಗಳು =100 ಅಂಕಗಳು , ಪತ್ರಿಕೆ–2 : 100 ಪ್ರಶ್ನೆಗಳು =200 ಅಂಕಗಳು ಒಟ್ಟು 300 ಅಂಕಗಳಿಗೆ ನಡೆಯಲಿದೆ,ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1ಗಂಟೆಯವರೆಗೆ ಒಂದೇ ಅವಧಿಯಲ್ಲಿ ನಡೆಯಲಿದೆ ಎಂದರು.

ಪರೀಕ್ಷೆ ಬರೆಯುವ ಅಭ್ಯರ್ಥಿಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ, ಆಸನ, ಶೌಚಾಲಯ ವ್ಯವಸ್ಥೆಯನ್ನ ಕಲ್ಪಿಸಬೇಕು. ಪರೀಕ್ಷಾ ಕೇಂದ್ರದ



ಪ್ರವೇಶ ದ್ವಾರದಲ್ಲಿ ಅಭ್ಯರ್ಥಿಗಳ ಗುರುತಿನ ಚೀಟಿ ಮತ್ತು ಅಡ್ಮಿಟ್ ಕಾರ್ಡ್‌ನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ಫೋಟೋ ಸಹಿತ ಪರಿಶೀಲಿಸಿದ ನಂತರವಷ್ಟೇ ಪ್ರವೇಶಕ್ಕೆ ಅವಕಾಶ ನೀಡಲಾಗುವುದು. ಪ್ರಾಧಿಕಾರ ನಿಗದಿಪಡಿಸಿದ ವಸ್ತ್ರ ಸಂಹಿತೆಯನ್ನು ಕಡ್ಡಾಯವಾಗಿ ಪಾಲಿಸಬೇಕು. ತಪಾಸಣೆಗಾಗಿ ಪ್ರತಿ ಕೇಂದ್ರದಲ್ಲಿ ಹೋಮ್ ಗಾರ್ಡ್‌ಗಳು ಹಾಗೂ ವಸ್ತ್ರ ಸಂಹಿತೆ ಅಧಿಕಾರಿಗಳನ್ನು ನೇಮಿಸಲಾಗುವುದು ಮತ್ತು ಪರೀಕ್ಷಾ ಕೊಠಡಿಯೊಳಗೆ ಯಾವುದೇ ಮಾದರಿಯ ಎಲೆಕ್ಟ್ರಾನಿಕ್ ಉಪಕರಣಗಳು ಅಥವಾ ಕೈಗಡಿಯಾರಗಳನ್ನು ತರುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂದರು.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತಲಿನ 200 ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗುತ್ತಿದ್ದು ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗುವುದು, ಮತ್ತು ಪರೀಕ್ಷೆ ಕೇಂದ್ರಗಳ ಸುತ್ತಲಿನ ಜೆರಾಕ್ಸ್ ಅಂಗಡಿಗಳು ತೆರೆಯದಂತೆ ಸೂಚಿಸಲಾಗುವುದು ಹಾಗೂ ಎಲ್ಲಾ ಕೇಂದ್ರಗಳಲ್ಲಿ ಸಿಸಿಟಿವಿ ರೆಕಾರ್ಡಿಂಗ್ ಮತ್ತು ಲೈವ್ ವೆಬ್‌ಕಾಸ್ಟಿಂಗ್ ಇರಲಿದ್ದು, ಅಭ್ಯರ್ಥಿಗಳು ಹಾಗೂ ಸಿಬ್ಬಂದಿಗಳು ನಿಯಮಿತ ಸಮಯಕ್ಕಿಂತ ಮುಂಚಿತವಾಗಿ ಪರೀಕ್ಷಾ ಕೇಂದ್ರದಲ್ಲಿ ಹಾಜರಾಗಿ ಪರೀಕ್ಷೆಯನ್ನು ಯಶಸ್ವಿಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಶೀಲವಂತ ಶಿವಕುಮಾರ್, ಡಿಡಿಪಿಯು ಪಳನಿವೇಲು ಡಿಡಿಪಿಯು ಬಿ.ಹೆಚ್.ಕೃಷ್ಣಪ್ರಸಾದ್ ಹಾಗೂ ಇತರರು ಉಪಸ್ಥಿತರಿದ್ದರು.

**19–ಪರೀಕ್ಷಾ ಕೇಂದ್ರಗಳ ವಿವರ:**

1.ಪಿ. ಜೆ. ಎಕ್ಸ್‌ಟೆನ್ಷನ್ ಮೋತಿವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, 2. ಪಿ. ಜೆ. ಎಕ್ಸ್‌ಟೆನ್ಷನ್ ಎ.ಆರ್.ಜಿ. ಪದವಿ ಪೂರ್ವ ಕಲಾ ಮತ್ತು ವಾಣಿಜ್ಯ ಕಾಲೇಜು , 3. ಹದಡಿ ಮುಖ್ಯ ರಸ್ತೆ, ಜಿಲ್ಲಾ ಕ್ರೀಡಾಂಗಣದ ಹತ್ತಿರ ಡಿ.ಆರ್.ಎಮ್. ವಿಜ್ಞಾನ ಪದವಿ ಪೂರ್ವ ಕಾಲೇಜು, 4. ಕೆ.ಆರ್. ರಸ್ತೆ, ಸರ್ಕಾರಿ ಮಾಜಿ ಪುರಸಭೆ ಪದವಿ ಪೂರ್ವ ಕಾಲೇಜು, 5. ಪಿ. ಜೆ. ಎಕ್ಸ್‌ಟೆನ್ಷನ್ ರಾಜನಹಳ್ಳಿ ಸೀತಮ್ಮ ಸರ್ಕಾರಿ ಹೆಣ್ಣು ಮಕ್ಕಳ ಪದವಿ ಪೂರ್ವ ಕಾಲೇಜು,6. ಎಸ್‌ಎಸ್ ಲೇಔಟ್, ಬಾಪೂಜಿ ಬ್ಯಾಂಕ್ ಸಮುದಾಯ ಭವನದ ಹಿಂಭಾಗ , ಡಾ. ಶಾಮನೂರು ಶಿವಶಂಕರಪ್ಪ ಪದವಿ ಪೂರ್ವ ಕಾಲೇಜು, 7. ಎಸ್.ಎಸ್. ಲೇಔಟ್, 'ಎ' ಬ್ಲಾಕ್, ಕುಂದವಾಡ ಕೆರೆ ಹತ್ತಿರ, ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜು.

, 8. ಡೆಂಟಲ್ ಕಾಲೇಜು ರಸ್ತೆ, ಎಂ.ಸಿ.ಸಿ 'ಬಿ' ಬ್ಲಾಕ್, ಯು.ಬಿ.ಡಿ.ಟಿ. ಬಾಲಕರ ವಸತಿನಿಲಯದ ಹತ್ತಿರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಕೇಂದ್ರ, 9. ಎಸ್.ಎಸ್. ಲೇಔಟ್, 'ಎ' ಬ್ಲಾಕ್, ಒಳಾಂಗಣ ಕ್ರೀಡಾಂಗಣದ ಹತ್ತಿರ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು 10. ವಿದ್ಯಾನಗರ ತರಳುಬಾಳು ಬಡಾವಣೆ, ಈಶ್ವರ ಪಾರ್ವತಿ ದೇವಾಲಯದ ಎದುರು, ಮಗನೂರು ಬಸಪ್ಪ ಪದವಿ ಪೂರ್ವ ಕಾಲೇಜು, 11. 2ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಸಾಯಿ ರಾಮ ಪಾರ್ಕ್ ಹತ್ತಿರ, ಪಿ. ಜೆ. ಎಕ್ಸ್‌ಟೆನ್ಷನ್, ಎಸ್.ಎ.ಜಿ.ಬಿ. ಸಂಯುಕ್ತ ಪದವಿ ಪೂರ್ವ ಕಾಲೇಜು , 12.ಅಕ್ಕಮಹಾದೇವಿ ರಸ್ತೆ, ಪಿ. ಜೆ. ಎಕ್ಸ್‌ಟೆನ್ಷನ್ ,ಎ.ವಿ. ಕಮಲಮ್ಮ ಪದವಿ ಪೂರ್ವ ಕಾಲೇಜು, 13. ಹೆಚ್.ಆರ್.ಬಿ. ಲೇಔಟ್ ಶಿವಕುಮಾರ ಸ್ವಾಮಿ ಬಡಾವಣೆ ಸೆಂಟ್ ಜಾನ್ಸ್ ವಿಜ್ಞಾನ ಪದವಿ ಪೂರ್ವ ಕಾಲೇಜು, 14. ಪಿ. ಜೆ. ಎಕ್ಸ್‌ಟೆನ್ಷನ್, ರಾಮಕೃಷ್ಣ ನರ್ಸಿಂಗ್ ಹೋಮ್ ಹತ್ತಿರ,ಸೆಂಟ್ ಪಾಲ್ಸ್ ಪದವಿ ಪೂರ್ವ ಕಾಲೇಜು, 15. #1179/7, ಎಸ್. ನಿಜಲಿಂಗಪ್ಪ ಲೇಔಟ್, ಅಮೃತ ಪದವಿ ಪೂರ್ವ ಕಾಲೇಜು, 16. ನಿಜಲಿಂಗಪ್ಪ ಲೇಔಟ್, ಶ್ರೀ ಗುರುಬಸವೇಶ್ವರ ಛತ್ರದ ಹತ್ತಿರ ಎಸ್.ಎಲ್. ಪದವಿ ಪೂರ್ವ ಕಾಲೇಜು , 17. ವಿದ್ಯಾನಗರ ಹದಡಿ ರಸ್ತೆ ಅನುಭವ ಮಂಟಪ, ಶ್ರೀ ತರಳುಬಾಳು ಜಗದ್ಗುರು ಸಂಯುಕ್ತ ಪದವಿ ಪೂರ್ವ ಕಾಲೇಜು, 18. ಎಸ್.ಎಸ್. ಲೇಔಟ್, 'ಎ' ಬ್ಲಾಕ್, ಕುಂದವಾಡ ಕೆರೆ ಹತ್ತಿರ, ಅಥಣಿ ಸಂಯುಕ್ತ ಪದವಿ ಪೂರ್ವ ಕಾಲೇಜು, 19. ಪಿ. ಜೆ. ಎಕ್ಸ್‌ಟೆನ್ಷನ್, ರೈಲ್ವೆ ನಿಲ್ದಾಣದ ಹತ್ತಿರ ಸರ್ಕಾರಿ ಪದವಿ ಪೂರ್ವ ಬಾಲಕರ ಕಾಲೇಜು.

# ಮೊಬೈಲ್, ಕಂಪ್ಯೂಟರ್ ಅತಿಯಾದ ಬಳಕೆಯಿಂದ ಕಣ್ಣಿನ ಆರೋಗ್ಯಕ್ಕೆ ಹಾನಿ: ಡಾ. ನಾಗರಾಜ ಎಚ್ಚರಿಕೆ

**ಶಿಗ್ಗಾಂವಿ :** ನಮ್ಮ ದೇಹದ ಪ್ರಮುಖ ಅಂಗವಾದ ಕಣ್ಣುಗಳಿಗೆ ವಿಶ್ರಾಂತಿ ನೀಡದೇ ಅಶಿಸ್ತಿನ ದಿನಚರಿಯಿಂದ ಕಣ್ಣುಗಳ ಆರೋಗ್ಯ ಹಾಳು ಮಾಡಿಕೊಳ್ಳಬಾರದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ನಾಗರಾಜ ಹೇಳಿದರು.

ಪಟ್ಟಣದ ಫೀನಿಕ್ಸ್ ಶಿಕ್ಷಣ ಸಂಸ್ಥೆಯ ಸಭಾಂಗಣದಲ್ಲಿ ಜರುಗಿದ 27ನೇ ವಿಶ್ವ ದೃಷ್ಟಿ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೊಬೈಲ್, ಟಿವಿ, ಕಂಪ್ಯೂಟರ್, ಲ್ಯಾಪ್‌ಟಾಪ್ ಗಳಂತಹ ತೀಕ್ಷ್ಣ ಪರದೆ ಬೆಳಕಿನಿಂದ ಕಣ್ಣುಗಳ ಮೇಲೆ ದುಷ್ಪರಿಣಾಮ ಬೀರುತ್ತದೆ. ಅವಶ್ಯಕತೆ ಮತ್ತು ಕ್ರಮಬದ್ಧವಾಗಿ ಇವುಗಳನ್ನು ಬಳಕೆ ಮಾಡಬೇಕು ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಜಿಲ್ಲಾ ಅಂಧತ್ವ ನಿಯಂತ್ರಣ ಅಧಿಕಾರಿ ಡಾ. ಚನ್ನಬಸಪ್ಪ ವಿರಕ್ತಮಠ ಮಾತನಾಡಿ, ಪಾಶ್ಚಿಮಾತ್ಯ ಸಂಸ್ಕೃತಿಯ ವ್ಯಾಮೋಹದಿಂದ ಯುವ ಪೀಳಿಗೆ ಆಹಾರ ಪದ್ಧತಿ ಬದಲಾಯಿಸುತ್ತಿರುವುದು ದುರಂತ. ನಮ್ಮ



ಮೂಲ ಆಹಾರ ಪದ್ಧತಿಯೇ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಡುತ್ತದೆ. 40 ವರ್ಷ ಮೇಲ್ಪಟ್ಟವರು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಕಣ್ಣಿನ ಪರೀಕ್ಷೆ ಮಾಡಿಸಿಕೊಳ್ಳಬಹುದು. ಪ್ರತಿ ವರ್ಷ ಹಾವೇರಿ ಜಿಲ್ಲೆಯಲ್ಲಿ 12,000 ಉಚಿತ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಲಾಗುತ್ತಿದೆ. ಕಣ್ಣಿನ ದಾನ ಸರ್ವಶ್ರೇಷ್ಠವಾಗಿದ್ದು, ಸಾರ್ವಜನಿಕರು ಈ ನಿಟ್ಟಿನಲ್ಲಿ ಸಮಾಜಮುಖಿ ಕಾರ್ಯದಲ್ಲಿ ತೊಡಗಬೇಕು. ಜಿಲ್ಲೆಯಲ್ಲಿ ಇನ್ನೂ 5,000 ಕಣ್ಣಿನ ದಾನದ ಬೇಡಿಕೆ ಇದೆ ಎಂದರು.

ನಂತರ ವೈದ್ಯರು, ಅಧಿಕಾರಿಗಳು ಮತ್ತು ಸಿಬ್ಬಂದಿಗೆ ಫೀನಿಕ್ಸ್ ಶಿಕ್ಷಣ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು.

ಫೀನಿಕ್ಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ರಾಣಿ ತೀರ್ಲಾಪುರ ಅಧ್ಯಕ್ಷತೆ ವಹಿಸಿದ್ದರು. ಶಿಗ್ಗಾಂವಿ ಆಡಳಿತ ವೈದ್ಯಾಧಿಕಾರಿ ಡಾ. ಮಲಕಾಜಯ್ಯ, ಡಾ. ಶಿವಕುಮಾರ, ಪ್ರಾಚಾರ್ಯ ಸೌಮ್ಯ ಕಟ್ಟಿಮನಿ, ನೇತ್ರಾಧಿಕಾರಿ ವಿಕ್ರಮ್ ಸಣ್ಣಮನಿ, ಜೂನಿಯರ್ ರಾಜಕುಮಾರ ಖ್ಯಾತಿಯ ಅಶೋಕ ಬಸ್ತಿ, ಜಲಯೋಗಪಟು ರಾಜು ಪೇಟಕರ ಸೇರಿದಂತೆ ಸರ್ಕಾರಿ ಆಸ್ಪತ್ರೆಯ ನೇತ್ರ ತಂತ್ರಜ್ಞರು, ಅಧಿಕಾರಿಗಳು ಉಪಸ್ಥಿತರಿದ್ದರು.

## ಆತ್ಮಾಹುತಿ ಸಂಚು ಭಗ್ನಗೊಳಿಸಿ 174 ಜೀವ ರಕ್ಷಿಸಿದ ಭಾರತೀಯ ಕ್ಯಾಪ್ಟನ್ ಸ್ಮಿತ್‌ಗೆ ಇಸ್ರೇಲ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಘೋಷಣೆ

**ಜೆರುಸಲೆಮ್:** ದುಬೈನಿಂದ ಇಸ್ರೇಲ್‌ಗೆ ತೆರಳುತ್ತಿದ್ದ ವಿಮಾನವನ್ನು



ಪತನಗೊಳಿಸಲು ಒಮಾನಿ ಮೂಲದ ಸಹ–ಪೈಲಟ್ ನಡೆಸಿದ ಭೀಕರ ಆತ್ಮಾಹುತಿ ದಾಳಿಯ ಸಂಚನ್ನು ಪ್ರಾಣದ ಹಂಗು ತೊರೆದು ಭಗ್ನಗೊಳಿಸಿದ ಫ್ಲೈದುಬೈ ಸಂಸ್ಥೆಯ ಭಾರತೀಯ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರಿಗೆ ಇಸ್ರೇಲ್ ಸರ್ಕಾರವು ತನ್ನ ಅತ್ಯುನ್ನತ ನಾಗರಿಕ ಗೌರವವನ್ನು ಘೋಷಿಸಿದೆ. ವಿಮಾನದಲ್ಲಿದ್ದ 174 ಪ್ರಯಾಣಿಕರ ಜೀವ ಉಳಿಸಲು ಅಸಾಧಾರಣ ಧೈರ್ಯ ಮತ್ತು ಸಮಯಪ್ರಜ್ಞೆ ಮೆರೆದ ಕ್ಯಾಪ್ಟನ್ ಸ್ಮಿತ್ ಅವರಿಗೆ ಇಸ್ರೇಲ್‌ನ ಪ್ರತಿಷ್ಠಿತ 'ಪ್ರೆಸಿಡೆನ್ಶಿಯಲ್ ಅವಾರ್ಡ್ ಫಾರ್ ಸಿವಿಲಿಯನ್ ಹೀರೊಯಿಸಂ' ಪ್ರಶಸ್ತಿಯನ್ನು ನೀಡಿ ಗೌರವಿಸಲಾಗುವುದು ಎಂದು ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಅವರು ಜೆರುಸಲೆಮ್‌ನಲ್ಲಿ ಅಧಿಕೃತವಾಗಿ ಪ್ರಕಟಿಸಿದ್ದಾರೆ. ಕಳೆದ ಸೆಪ್ಟೆಂಬರ್ 30 ರಂದು ದುಬೈನಿಂದ ಟೆಲ್ ಅವೀವ್‌ಗೆ ಫ್ಲೈದುಬೈ ಸಂಸ್ಥೆಯ 'FZ1073' ವಿಮಾನವು ಹೊರಟಿತ್ತು. ವಿಮಾನವು ಆಕಾಶದಲ್ಲಿ ಹಾರಾಟ ನಡೆಸುತ್ತಿದ್ದಾಗ, ಒಮಾನಿ ಮೂಲದ ಸಹ–ಪೈಲಟ್ ಹಮಾಮ್ ಅಲ್–ಹಮ್ಮಾಮಿ ಎಂಬಾತ ವಿಮಾನವನ್ನು ನಿಯಂತ್ರಣಕ್ಕೆ ತಗೆದು–ಕೊಂಡು ಯಾವುದಾದರೂ ಕಟ್ಟಡಕ್ಕೆ ಡಿಕ್ಕಿ ಹೊಡೆಸಿ ಪತನಗೊಳಿಸಲು ಸಂಚು ರೂಪಿಸಿದ್ದನು. ಇದಕ್ಕಾಗಿ ಆತ ಕಾಕ್‌ಪಿಟ್ ಒಳಗಡೆಯೇ ಮುಖ್ಯ ಪೈಲಟ್ ಆಗಿದ್ದ ಭಾರತದ ಕ್ಯಾಪ್ಟನ್ ಸ್ಮಿತ್ ಮಚ್ಚಾರ್ ಅವರ ಮೇಲೆ ಕೊಡಲಿಯಿಂದ ಭೀಕರವಾಗಿ ಹಲ್ಲೆ ನಡೆಸಿದನು. ತಲೆಬುರುಡೆ ಹಾಗೂ ದೇಹದ ಹಲವು ಭಾಗಗಳಿಗೆ ಕೊಡಲಿ ಏಟು ಬಿದ್ದು ತೀವ್ರ ರಕ್ತಸ್ರಾವವಾಗುತ್ತಿದ್ದರೂ ಧೃತಿಗೆಡದ ಕ್ಯಾಪ್ಟನ್ ಸ್ಮಿತ್, ದಾಳಿಕೋರ ಸಹ–ಪೈಲಟ್‌ನೊಂದಿಗೆ ತೀವ್ರವಾಗಿ ಹೋರಾಡಿದರು.

# ಶ್ರೀದೇವಿ ಮಹಿಮೆ

ಜಗನ್ಮಾತೆ ಶ್ರೀದೇವಿ –ಸಕಲ ಜಗತ್ತಿನ ಆದಿಶಕ್ತಿ, ಸೃಷ್ಟಿಯ ಮೂಲಶಕ್ತಿ ಹಾಗೂ ಭಕ್ತರ ಪಾಲಿನ ಕರುಣಾಮಯಿ ತಾಯಿ .

ಭಾರತೀಯ ಸನಾತನ ಧರ್ಮದ ಪುರಾಣಗಳಲ್ಲಿ ದೇವಿಯ ಮಹಿಮೆಗೆ ವಿಶೇಷವಾದ ಸ್ಥಾನವಿದೆ. ದುರ್ಗೆ, ಲಕ್ಷ್ಮಿ, ಸರಸ್ವತಿ, ಪಾರ್ವತಿ, ಚಾಮುಂಡೇಶ್ವರಿ ಮುಂತಾದ ವಿವಿಧ ರೂಪಗಳಲ್ಲಿ ಆರಾಧಿಸಲ್ಪಡುವ ಶ್ರೀದೇವಿಯು ಶಕ್ತಿ, ಜ್ಞಾನ, ಸಂಪತ್ತು, ಧೈರ್ಯ ಮತ್ತು ಕರುಣೆಯ ಪ್ರತೀಕವಾಗಿದ್ದಾಳೆ. ಜಗತ್ತಿನ ಸೃಷ್ಟಿ, ಸ್ಥಿತಿ ಮತ್ತು ಲಯದ ಶಕ್ತಿಯಾಗಿ ದೇವಿಯನ್ನು ಭಕ್ತರು ಪೂಜಿಸುತ್ತಾರೆ.

ದೇವಿಯ ಅವತಾರ ಮತ್ತು ಮಹಿಮೆ ಪುರಾಣಗಳ ಕಥೆಗಳ ಪ್ರಕಾರ, ಲೋಕದಲ್ಲಿ ಅಧರ್ಮ ಹೆಚ್ಚಾದಾಗ, ದುಷ್ಟಶಕ್ತಿಗಳು ಸಜ್ಜನರಿಗೆ ತೊಂದರೆ ನೀಡಿದಾಗ, ಧರ್ಮವನ್ನು ರಕ್ಷಿಸಲು ಹಾಗೂ ಅಧರ್ಮವನ್ನು ನಾಶಮಾಡಲು ಜಗನ್ಮಾತೆ ವಿವಿಧ ರೂಪಗಳಲ್ಲಿ ಅವತರಿಸುತ್ತಾಳೆ.

ಮಹಿಷಾಸುರನೆಂಬ ರಾಕ್ಷಸನು ತನ್ನ ಬಲ ಮತ್ತು ಅಹಂಕಾರದಿಂದ ದೇವತೆಗಳಿಗೂ ಲೋಕದ ಜನರಿಗೂ ಸಂಕಟವನ್ನುಂಟು ಮಾಡಿದನು. ಆಗ ದೇವತೆಗಳೆಲ್ಲರೂ ಆದಿಶಕ್ತಿಯನ್ನು ಪ್ರಾರ್ಥಿಸಿದರು. ದೇವತೆಗಳ ದಿವ್ಯ ತೇಜಸ್ಸಿನಿಂದ ಮಹಾಶಕ್ತಿಯು ದುರ್ಗಾದೇವಿಯ ರೂಪದಲ್ಲಿ ಪ್ರಕಟಳಾದಳು.

ಸಿಂಹವಾಹಿನಿಯಾಗಿ, ಕೈಗಳಲ್ಲಿ ವಿವಿಧ ಆಯುಧಗಳನ್ನು ಧರಿಸಿ, ಮಹಿಷಾಸುರನೊಂದಿಗೆ ಭೀಕರ ಯುದ್ಧವನ್ನು ನಡೆಸಿದಳು. ಕೊನೆಗೆ ದುಷ್ಟಶಕ್ತಿಯನ್ನು ಸಂಹರಿಸಿ ಧರ್ಮವನ್ನು ಪುನಃ ಸ್ಥಾಪಿಸಿದಳು.

ಈ ಕಥೆಯು ನಮಗೆ ಸಾರುವ ಸಂದೇಶವೇನೆಂದರೆ, ಅಹಂಕಾರ ಎಷ್ಟೇ ಬಲಶಾಲಿಯಾಗಿದ್ದರೂ ಸತ್ಯ, ಧರ್ಮ ಮತ್ತು ದೈವಿಕ ಶಕ್ತಿಯ ಮುಂದೆ ಅದು ಶಾಶ್ವತವಾಗಿ ನಿಲ್ಲಲಾರದು.

ಭಕ್ತರ ಪಾಲಿನ ಕರುಣಾಮಯಿ ತಾಯಿ

ಶ್ರೀದೇವಿಯು ಕೇವಲ ದುಷ್ಟಶಕ್ತಿಗಳನ್ನು ಸಂಹರಿಸುವ ಶಕ್ತಿಯಲ್ಲ; ತನ್ನನ್ನು ನಂಬಿ ಬರುವ ಭಕ್ತರಿಗೆ ಧೈರ್ಯ, ನೆಮ್ಮದಿ ಮತ್ತು ಆತ್ಮವಿಶ್ವಾಸವನ್ನು ನೀಡುವ ಕರುಣಾಮಯಿ ತಾಯಿಯೂ ಆಗಿದ್ದಾಳೆ.

ತಾಯಿಯ ಸನ್ನಿಧಿಯಲ್ಲಿ ಭಕ್ತರು ತಮ್ಮ ನೋವು, ಸಂಕಟ, ಕಷ್ಟ ಹಾಗೂ ಮನದ ಬಯಕೆಗಳನ್ನು ಸಮರ್ಪಿಸುತ್ತಾರೆ. ಭಕ್ತಿಯಿಂದ ದೇವಿಯನ್ನು ಸ್ಮರಿಸುವುದರಿಂದ ಮನಸ್ಸಿಗೆ ಶಾಂತಿ ದೊರೆಯುತ್ತದೆ ಮತ್ತು ಜೀವನದ ಸವಾಲುಗಳನ್ನು ಎದುರಿಸುವ ಶಕ್ತಿ ಲಭಿಸುತ್ತದೆ ಎಂಬುದು ಭಕ್ತರ ನಂಬಿಕೆಯಾಗಿದೆ.

ಶ್ರೀದೇವಿಯ ಆರಾಧನೆ ಕೇವಲ ಧಾರ್ಮಿಕ ಆಚರಣೆಗೆ ಸೀಮಿತವಾಗದೆ ಅದು ಮಹಿಳೆಯರ ಗೌರವ ತಾಯಿತನದ ಮಹತ್ವ ಸ್ತ್ರೀ ಶಕ್ತಿ ಆರಾಧನೆ ಮತ್ತು ಸತ್ಕಾರ್ಯಗಳ ಸಂಕೇತವು ಆಗಿದೆ.



ದುರ್ಗಾದೇವಿಯಾಗಿ ಭಕ್ತರಿಗೆ ಧೈರ್ಯ ಮತ್ತು ದುಷ್ಟ ಶಕ್ತಿಗಳ ವಿರುದ್ಧ ಹೋರಾಡುವ ಶಕ್ತಿಯ ಸಂಕೇತವಾಗಿದ್ದಾಳೆ.

ಮಹಾಲಕ್ಷ್ಮಿಯಾಗಿ. ಭಕ್ತರ ಪಾಲಿಗೆ. ಸಂಪತ್ತು ಸಮೃದ್ಧಿ ಮತ್ತು ಮಂಗಳದ ಸಂಕೇತವಾಗಿದ್ದಾಳೆ.

ಸರಸ್ವತಿಯಾಗಿ ಭಕ್ತರಿಗೆ ಜ್ಞಾನ ವಿದ್ಯೆ ಕಲೆ ಸಾಹಿತ್ಯದ ಸಂಕೇತವಾಗಿದ್ದಾಳೆ.

ಪಾರ್ವತಿಯಾಗಿ ಭಕ್ತರಿಗೆ ಪ್ರೀತಿ ತ್ಯಾಗ ಮತ್ತು ಕುಟುಂಬ ಮೌಲ್ಯಗಳ ಸಂಕೇತವಾಗಿದ್ದಾಳೆ.

ದೇವಿ ಪುರಾಣ ಮಾನವ ಜೀವನದ ದಾರಿದೀಪದ ಮೌಲ್ಯವಾಗಿದೆ ದುಷ್ಟತನದ ವಿರುದ್ಧ ಹೋರಾಡುವುದು ಸತ್ಯದ ಹಾದಿಯಲ್ಲಿ ನಡೆಯುವುದು ಸಂಕಷ್ಟದಲ್ಲಿರುವವರಿಗೆ ನೆರವಾಗುವುದು ಹಿರಿಯರನ್ನು ಹೆತ್ತವರನ್ನು ಪೂಜಿಸುವುದು ಗೌರವಿಸುವುದು, ಪೋಷಿಸುವುದು ಸಕಲ ಜೀವಿಗಳಲ್ಲಿಯೂ ದೈವತ್ವವನ್ನು ಕಾಣುವುದು ದೇವಿ ಆರಾಧನೆ ನಿಜವಾದ ಅರ್ಥ.

ಮನುಷ್ಯನಲ್ಲಿ ಇರುವ ನಾನೆಂಬ ಅಹಂಕಾರ ತೊರೆದವರಿಗೆ ಸುಖ ಶಾಂತಿ ನೆಮ್ಮದಿ. ಸಮಾಧಾನ ಸಂಪತ್ತು ಅಧಿಕಾರ ಸಮೃದ್ಧಿ ಪ್ರೀತಿ ನೀತಿ ಶಕ್ತಿ ಐಶ್ವರ್ಯ ಧೈರ್ಯ ಸಾಹಸ ಆರೋಗ್ಯ ಸಕಲ ಇಷ್ಟಾರ್ಥಗಳನ್ನು ನೀಡುತ್ತಾಳೆ.



**–ಶಿವಾನಂದ ಮ್ಯಾಗೇರಿ .**
**ಸಾಹಿತಿಗಳು, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಶಿಗ್ಗಾವಿ.**

# ವಿದ್ಯಾರ್ಥಿಯ ತಲೆಯನ್ನೇ ತಬಲಾ ಮಾಡಿದ ವಿಕೃತ ಶಿಕ್ಷಕ: ವಿಡಿಯೋ ವೈರಲ್ ಬೆನ್ನಲ್ಲೇ ಶಿಕ್ಷಣ ಇಲಾಖೆಯಿಂದ ಗೇಟ್‌ಪಾಸ್



**ಇಟಾವಾ:** ಶಾಲೆ ಅಂದರೆ ಅದು ಮಕ್ಕಳಿಗೆ ಜ್ಞಾನ ನೀಡುವ ದೇಗುಲ. ಅಲ್ಲಿ ಶಿಕ್ಷಕರು ಮಕ್ಕಳಿಗೆ ಪ್ರೀತಿಯಿಂದ ಪಾಠ ಹೇಳಿಕೊಟ್ಟು ದಾರಿದೀಪವಾಗಬೇಕು. ಆದರೆ ಇಲ್ಲೊಬ್ಬ ಸರ್ಕಾರಿ ಶಾಲಾ ಶಿಕ್ಷಕ ಮಾಡಿರುವ ಅಮಾನವೀಯ ಕೃತ್ಯ ಈಗ ಸಾಮಾಜಿಕ ಜಾಲತಾಣದಲ್ಲಿ ಭಾರೀ ಆಕ್ರೋಶಕ್ಕೆ ಕಾರಣವಾಗಿದೆ. ಪಾಠ ಮಾಡಬೇಕಾದ ಶಿಕ್ಷಕ ವಿದ್ಯಾರ್ಥಿಯೊರ್ವನ ತಲೆಯನ್ನೇ 'ತಬಲಾ' ಮಾಡಿಕೊಂಡು ಬಾರಿಸಿರುವ ಘಟನೆ ಉತ್ತರ ಪ್ರದೇಶದಲ್ಲಿ ವರದಿಯಾಗಿದೆ.

ಉತ್ತರ ಪ್ರದೇಶದ ಇಟಾವಾ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಈ ಘಟನೆ ನಡೆದಿದೆ. ದಿನೇಶ್ ಕುಮಾರ್ ಮಾಥುರ್ ಎಂಬ ಶಿಕ್ಷಕ ಈ ಕೃತ್ಯ ಎಸಗಿದ ಆರೋಪಿಯಾಗಿದ್ದಾನೆ. ತರಗತಿಯೊಳಗೆ ಶಿಕ್ಷಕ ಮಾಥುರ್ ಕುರ್ಚಿಯ ಮೇಲೆ ಕುಳಿತಿದ್ದರೆ, ಎದುರಿಗೆ ಬಾಲಕನೊಬ್ಬ ನೆಲದ ಮೇಲೆ ಕುಳಿತ್ತಿದ್ದಾನೆ.

ನಂತರ ಶಿಕ್ಷಕ ಮಾಥುರ್, ಆ ವಿದ್ಯಾರ್ಥಿ ತಲೆಯ ಮೇಲೆ ಕೈಗಳನ್ನಿಟ್ಟು ತಬಲಾ ನುಡಿಸುವ ಶೈಲಿಯಲ್ಲಿ ಬಾರಿಸಲು ಶುರು ಮಾಡಿದ್ದಾರೆ. ಮಗುವಿನ ತಲೆಯನ್ನೇ ವಾದ್ಯದಂತೆ ಬಳಸಿಕೊಂಡು ಅಪಹಾಸ್ಯ ಮಾಡಲಾಗಿದೆ. ವಿಪರ್ಯಾಸವೆಂದರೆ, ಈ ಸಂಪೂರ್ಣ ದೃಶ್ಯವನ್ನು ಸ್ವತಃ ಶಿಕ್ಷಕ ದಿನೇಶ್ ಕುಮಾರ್ ತಮ್ಮ ಮೊಬೈಲ್‌ನಲ್ಲಿ ವಿಡಿಯೋ ಮಾಡಿಕೊಂಡಿದ್ದಾರಂತೆ.

ತಾನು ಮಾಡಿದ್ದು ತಪ್ಪು ಎನ್ನುವ ಕಿಂಚಿತ್ತೂ ಅರಿವಿಲ್ಲದ ಈ ಶಿಕ್ಷಕ, ಆ ವಿಡಿಯೋವನ್ನು ಹೆಮ್ಮೆಯಿಂದ ತಮ್ಮದೇ ಫೇಸ್‌ಬುಕ್ ಖಾತೆಯಲ್ಲಿ ಅಪ್‌ಲೋಡ್ ಕೂಡ ಮಾಡಿಕೊಂಡಿದ್ದಾರೆ. ಇಂಟರ್‌ನೆಟ್‌ನಲ್ಲಿ ವಿಡಿಯೋ ಪೋಸ್ಟ್ ಆಗುತ್ತಿದ್ದಂತೆ ವೈರಲ್ ಹರಿದಾಡಿದೆ. ಮುಗ್ಧ ಮಗುವಿನ ಮೇಲೆ ಈ ರೀತಿ ಅಮಾನವೀಯವಾಗಿ ನಡೆದುಕೊಂಡಿದ್ದನ್ನು ಕಂಡ ನೆಟ್ಟಿಗರು ಶಿಕ್ಷಕನ ವಿರುದ್ಧ ಕೆಂಡಾಮಂಡಲವಾಗಿದ್ದಾರೆ.

ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೋ ವೈರಲ್ ಆಗಿ ಸಾರ್ವಜನಿಕರ ಆಕ್ರೋಶ ಭುಗಿಲೇಳುತ್ತಿದ್ದಂತೆ, ಈ ವಿಷಯ ಉತ್ತರ ಪ್ರದೇಶದ ಶಿಕ್ಷಣ ಇಲಾಖೆ ಗಮನಕ್ಕೆ ಬಂದಿದೆ. ಘಟನೆಯನ್ನು ಗಂಭೀರವಾಗಿ ಪರಿಗಣಿಸಿದ ಇಲಾಖೆ ತಕ್ಷಣವೇ ಕಾರ್ಯಪ್ರವೃತ್ತವಾಗಿದೆ. ಶಿಕ್ಷಕನ ಈ ನಡೆ ಶಿಸ್ತುಭಂಗ ಎಂದು ಪರಿಗಣಿಸಿದ ಶಿಕ್ಷಣ ಇಲಾಖೆ, ದಿನೇಶ್ ಕುಮಾರ್ ಮಾಥುರ್?ರನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಶಿಕ್ಷಕನನ್ನು ಕೇವಲ ಅಮಾನತು ಮಾಡಿ ಕೈತೊಳೆದುಕೊಳ್ಳದ ಶಿಕ್ಷಣ ಇಲಾಖೆ, ಘಟನೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆಗೂ ಆದೇಶಿಸಿದೆ. ತರಗತಿ ಕೊಠಡಿಯಲ್ಲಿ ಇಂತಹ ಅಶಿಸ್ತು ಮತ್ತು ಬೇಜವಾಬ್ದಾರಿಯನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ತನಿಖಾ ವರದಿ ಕೈಸೇರಿದ ನಂತರ ಶಿಕ್ಷಕನ ವಿರುದ್ಧ ಮುಂದಿನ ಕಠಿಣ ಕಾನೂನು ಮತ್ತು ಇಲಾಖಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

# 6 ವರ್ಷದ ಮಗಳನ್ನು ಕರೆಗೆ ಬಿಸಾಡಿ ಹೋದ ತಾಯಿ

**ಹುಸೇನ್ ಸಾಗರ್:** ತಮ್ಮ ಜೀವಕ್ಕೆ, ಜೀವನಕ್ಕೆ ಎಂಥದ್ದೇ ಹೊಡೆತ ಬೀಳಲಿ, ತಾಯಿ ಮಾತ್ರ ಎಂದಿಗೂ ತನ್ನ ಮಕ್ಕಳನ್ನು ಬಿಟ್ಟುಕೊಡುವುದಿಲ್ಲ ಎಂಬ ಮಾತು ಇಂದಿಗೂ ನಮ್ಮಲ್ಲಿದೆ. ಹೋದರೆ ನನ್ನ ಜೀವವೇ ಹೋಗಲಿ ಎಂದು ಮಕ್ಕಳ ಪ್ರಾಣ ಉಳಿಸಲು ದಿಟ್ಟ ನಿರ್ಧಾರಗಳನ್ನು ಕೈಗೊಳ್ಳುವ ತಾಯಿ, ಅದೇ ಮಗುವನ್ನು ಕೆರೆಗೆ ಬಿಸಾಡಿ ಹೋಗುತ್ತಾಳೆ ಎಂದರೆ ನಂಬಲು ಸಾಧ್ಯವೇ? ಅಚ್ಚರಿ ಎನಿಸಿದರೂ ಇದು ನಿಜವೇ ಎಂಬುದಕ್ಕೆ ಹೈದರಾಬಾದ್‌ನಲ್ಲಿ ನಡೆದ ಈ ಘಟನೆಯೇ ಜ್ವಲಂತ ಸಾಕ್ಷಿ.



ತನ್ನ ಮಗುವಿನ ಚಿಕಿತ್ಸೆಗೆ ಹಣ ಹೊಂದಿಸಲು ಸಾಧ್ಯವಾಗದ ಮಹಿಳೆಯೊಬ್ಬರು, ಎಷ್ಟೋ ಆಸ್ಪತ್ರೆಗಳನ್ನು ಸುತ್ತಿ, ಮಗಳ ಆರೋಗ್ಯದ ಬಗ್ಗೆ ತೋರಿಸಿದರೂ ಆಕೆ ಗುಣಮುಖಳಾಗುವ ಲಕ್ಷಣಗಳು ಕಾಣಿಸಿಲ್ಲ.

ಮತ್ತೊಂದೆಡೆ, ತೀರ ಬಡತನವಿದ್ದು, ಇಬ್ಬರು ಹೆಣ್ಣುಮಕ್ಕಳನ್ನು ಸಾಕುವ ಜವಾಬ್ದಾರಿ ತನ್ನ ಮೇಲೆಯೇ ಸಂಪೂರ್ಣವಾಗಿ ಇದ್ದ ಕಾರಣ, ಮಗಳನ್ನು ಕೆರೆಗೆ ಬಿಸಾಡುವಂತೆ ಕಠೋರ ನಿರ್ಧಾರವನ್ನು ಕೈಗೊಂಡಿದ್ದಾರೆ. ಅದೃಷ್ಟವಶಾತ್ ಬಾಲಕಿ ಪ್ರಾಣಪಾಯದಿಂದ ಬದುಕುಳಿದಿದ್ದು, ಸ್ಥಳೀಯ ಆಟೋ ಚಾಲಕ ಆಕೆಯನ್ನು ಸಾವಿನಿಂದ ಪಾರು ಮಾಡಿದ ಪುಣ್ಯಾತ್ಮ ಎನ್ನಲಾಗಿದೆ.

ಹಳೆಯ ಬೋಯಿನ್‌ಪಲ್ಲಿಯ ಹಸ್ಮತ್‌ಪೇಟ್ ನಿವಾಸಿಯಾದ ಶಬಾನಾ ಎಂಬ ಮಹಿಳೆಯನ್ನು ಆಕೆಯ ಪತಿ ಐದು ವರ್ಷಗಳ ಹಿಂದೆಯೇ ಬಿಟ್ಟು ಹೋಗಿದ್ದು, ಅಂದಿನಿಂದಲೂ ಸ್ಥಳೀಯ ಮನೆಗಳಲ್ಲಿ ಕೆಲಸ ಮಾಡಿಕೊಂಡು ತನ್ನಿಬ್ಬರು ಹೆಣ್ಣುಮಕ್ಕಳನ್ನು ಸಾಕುತ್ತಿದ್ದ ಶಬಾನಾಗೆ, ಅವರ ಎರಡನೇ ಮಗಳಾದ ರುಕ್ಸಾನಾ (6) ತೀವ್ರ ಅನಾರೋಗ್ಯಕ್ಕೆ ಒಳಗಾಗಿದ್ದಳು.

ಮಗು ಕಳೆದ ಕೆಲವು ದಿನಗಳಿಂದ ಕರುಳಿನ ಸೋಂಕಿನಿಂದ ಬಳಲುತ್ತಿತ್ತು. ಮಗಳನ್ನು ಗುಣಪಡಿಸಲು ಹಲವು ಆಸ್ಪತ್ರೆಗಳಿಗೆ ಕರೆದೊಯ್ದಿದ್ದೇ ಆದರೂ ಎಲ್ಲಿಯೂ ಪ್ರಯೋಜನವಾಗಿಲ್ಲ. ಮಗುವಿಗೆ ಉತ್ತಮ ಚಿಕಿತ್ಸೆಯ ಅಗತ್ಯವಿದೆ ಎಂದು ವೈದ್ಯರು ತಿಳಿಸಿದ್ದ ಹಿನ್ನೆಲೆ ಹಣದ ಅವಶ್ಯಕತೆ ಎದುರಾಗಿತ್ತು.

ಉತ್ತಮ ಚಿಕಿತ್ಸೆ ಕೊಡಿಸುವುದು ಶಬಾನಾಗೆ ಹೊರೆಯಾಗಿತ್ತು. ಈ ಹಿನ್ನೆಲೆಯಲ್ಲಿ ಆಕೆ ತನಗೆ ಬೇರೆ ದಾರಿಯೇ ಇಲ್ಲವೆಂದು ಕಠೋರ ನಿರ್ಧಾರವನ್ನು ಕೈಗೊಂಡರು. ಅದೇ, ಗುರುವಾರ ಮಧ್ಯಾಹ್ನ 2 ಗಂಟೆ ಸುಮಾರಿಗೆ ಮಗಳನ್ನು ಹುಸೇನ್ ಸಾಗರ್ ಕರೆಗೆ ಬಿಸಾಡಿ ಹೋಗುವುದು. ಮಗಳೊಂದಿಗೆ ಇದ್ದ ಶಬಾನಾ, ನೋಡ ನೋಡುತ್ತಿದ್ದಂತೆಯೇ ಪುತ್ರಿಯನ್ನು ನೀರಿಗೆ ನೂಕಿದ್ದಾರೆ.

ಈ ವೇಳೆ, ಅದೇ ದಾರಿಯಲ್ಲಿ ಹೋಗುತ್ತಿದ್ದ ಆಟೋ ಚಾಲಕರೊಬ್ಬರು ಮಗುವನ್ನು ಕಂಡು ತಕ್ಷಣವೇ ಕೆರೆಗೆ ಜಿಗಿದು ಬಾಲಕಿಯ ಜೀವವನ್ನು ಉಳಿಸಿದ್ದಾರೆ. ಸದ್ಯ ಮಗುವಿಗೆ ಗಾಂಧಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ಕೊಡಿಸಲಾಗಿದೆ ಎಂದು ವರದಿಗಳು ತಿಳಿಸಿವೆ,

## ಮೈಸೂರು ದಸರಾ ಪ್ರವಾಸಿಗರಿಗೆ ಗುಡ್‌ನ್ಯೂಸ್

# ಕೆಎಸ್‌ಟಿಡಿಸಿಯಿಂದ 7 ವಿಶೇಷ ಪ್ರವಾಸ ಪ್ಯಾಕೇಜ್ ಘೋಷಣೆ

**ಬೆಂಗಳೂರು:** ವಿಶ್ವವಿಖ್ಯಾತ ಮೈಸೂರು ದಸರಾಕ್ಕೆ ಆಗಮಿಸುವ ಪ್ರವಾಸಿಗರಿಗೆ ಸುಗಮ ಮತ್ತು ವೈವಿಧ್ಯಮಯ ಪ್ರವಾಸಿ ಅನುಭವ ಕಲ್ಪಿಸುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ವಿಶೇಷ ಪ್ರವಾಸ ವ್ಯವಸ್ಥೆಗಳನ್ನು ರೂಪಿಸಿದೆ ಎಂದು ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.




ದಸರಾ ಸಂದರ್ಭದಲ್ಲಿ ಮೈಸೂರಿನ ಪ್ರಮುಖ ತಾಣಗಳು ಮತ್ತು ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಲು ಏಖಖಿ–ಆಅಯ ಜನಪ್ರಿಯ 'ಅಂಬಾರಿ' ಡಬಲ್ ಡೆಕ್ಕರ್ ಬಸ್ ಸೇವೆಯನ್ನು ವಿಶೇಷವಾಗಿ ನಡೆಸಲಾಗುತ್ತಿದೆ. ಇದರ ಜೊತೆಗೆ ಮೈಸೂರು ಹಾಗೂ ಸುತ್ತಮುತ್ತಲಿನ ಪ್ರಮುಖ ಪ್ರವಾಸಿ ತಾಣಗಳನ್ನು ಪರಿಚಯಿಸುವ ವಿಶೇಷ ಪ್ರವಾಸ ಪ್ಯಾಕೇಜ್‌ಗಳನ್ನು ರೂಪಿಸಲಾಗಿದೆ.

'ಅಂಬಾರಿ' ಡಬಲ್ ಡೆಕ್ಕರ್ ಬಸ್ ಹಗಲು ವೇಳೆಯಲ್ಲಿ ಬೆಳಗ್ಗೆ 10ರಿಂದ ಸಂಜೆ 5 ರವರೆಗೆ ಪ್ರತಿ ಗಂಟೆಗೊಮ್ಮೆ ಸಂಚರಿಸಲಿದೆ. ಹಗಲಿನ ಸವಾರಿಗೆ ಪ್ರತಿ ವ್ಯಕ್ತಿಗೆ 250 ದರ ನಿಗದಿಪಡಿಸಲಾಗಿದೆ.

ಮೈಸೂರಿನ ದಸರಾ ವಿದ್ಯುತ್ ದೀಪಾಲಂಕಾರವನ್ನು ವೀಕ್ಷಿಸಲು ಸಂಜೆ 6.30, ರಾತ್ರಿ 8 ಹಾಗೂ 9.30ಕ್ಕೆ ವಿಶೇಷ ಸವಾರಿಗಳು ಇರಲಿವೆ. ರಾತ್ರಿ ಸವಾರಿಯಲ್ಲಿ ಕೆಳಗಿನ ಡೆಕ್‌ಗೆ 250 ರೂ. ಹಾಗೂ ಮೇಲಿನ ಡೆಕ್‌ಗೆ 500 ರೂ. ದರ ನಿಗದಿಪಡಿಸಲಾಗಿದೆ.

ನಗರದ ಪ್ರಮುಖ ವೃತ್ತಗಳು, ಅರಮನೆ ಸುತ್ತಮುತ್ತಲಿನ ಪ್ರದೇಶಗಳು, ಸಯ್ಯಾಜಿರಾವ್ ರಸ್ತೆ ಸೇರಿದಂತೆ ದಸರಾ ದೀಪಾಲಂಕಾರದಿಂದ ಕಂಗೊಳಿಸುವ ಪ್ರಮುಖ ಭಾಗಗಳ ಮೂಲಕ 'ಅಂಬಾರಿ' ಸಂಚರಿಸುವಂತೆ ವ್ಯವಸ್ಥೆ ಮಾಡಲಾಗಿದೆ.

ದಸರಾಕ್ಕೆ ಆಗಮಿಸುವ ಪ್ರವಾಸಿಗರು ಮೈಸೂರು ನಗರಕ್ಕೆ ಮಾತ್ರ ಸೀಮಿತವಾಗದೆ ಕರ್ನಾಟಕದ ಇತರೆ ಪ್ರಮುಖ ಪ್ರವಾಸಿ ತಾಣಗಳನ್ನೂ ವೀಕ್ಷಿಸಲು ಅನುಕೂಲವಾಗುವಂತೆ ಏಖಖಿಆಅ ಏಳು ವಿಶೇಷ ಪ್ರವಾಸ ಯೋಜನೆಗಳನ್ನು ರೂಪಿಸಿದೆ.

ಊಟಿಯ ಎರಡು ದಿನಗಳ ಪ್ರವಾಸ, ಮೈಸೂರು ಸ್ಥಳೀಯ ಪ್ರವಾಸ, ಬೇಲೂರು–ಹಳೇಬೀಡು–ಶ್ರವಣಬೆಳಗೊಳ, ಕೊಡಗಿನ ಪ್ರಮುಖ ತಾಣಗಳು, ಶಿವನಸಮುದ್ರ ಮತ್ತು ಸುತ್ತಮುತ್ತಲಿನ ಪ್ರದೇಶಗಳು, ನಂಜನಗೂಡು ಸೇರಿದಂತೆ ವಿವಿಧ ಧಾರ್ಮಿಕ, ಐತಿಹಾಸಿಕ ಮತ್ತು ನೈಸರ್ಗಿಕ ಪ್ರವಾಸಿ ತಾಣಗಳನ್ನು ಒಳಗೊಂಡ ಒಂದು ಹಾಗೂ ಎರಡು ದಿನಗಳ ಪ್ಯಾಕೇಜ್‌ಗಳು ಲಭ್ಯವಿವೆ.

ಮೈಸೂರು ದಸರಾವನ್ನು ನೋಡಲು ಬರುವ ಪ್ರವಾಸಿಗರು ಕೇವಲ ಒಂದು ಕಾರ್ಯಕ್ರಮವನ್ನು ನೋಡಿ ಹಿಂದಿರುಗದೆ, ಮೈಸೂರಿನ ವೈಭವದ ಜೊತೆಗೆ ಸುತ್ತಮುತ್ತಲಿನ ಇತರೆ ಪ್ರವಾಸಿ ತಾಣಗಳನ್ನೂ ಅನುಭವಿಸಬೇಕು. ಅದಕ್ಕಾಗಿ ಸುಗಮ ಪ್ರಯಾಣ, ವಿಶ್ವಾಸಾರ್ಹ ಸೇವೆ ಮತ್ತು ವೈವಿಧ್ಯಮಯ ಪ್ರವಾಸ ಪ್ಯಾಕೇಜ್‌ಗಳನ್ನು KSTDC ಮೂಲಕ ಒದಗಿಸಲಾಗುತ್ತಿದೆ. ಪ್ರವಾಸಿಗರಿಗೆ ದಸರಾ ಅನುಭವವನ್ನು ಇನ್ನಷ್ಟು ಸ್ಮರಣೀಯವಾಗಿಸುವುದು ನಮ್ಮ ಉದ್ದೇಶ ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಪ್ರವಾಸೋದ್ಯಮ ಇಲಾಖೆಯ ಕಾರ್ಯದರ್ಶಿ ಡಾ. ರಾಮ್ ಪ್ರಸಾತ್ ಮನೋಹರ್ ಮಾತನಾಡಿ, ದಸರಾ ಸಂದರ್ಭದಲ್ಲಿ ಮೈಸೂರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಆಗಮಿಸುವುದರಿಂದ ಅವರ ಪ್ರಯಾಣವನ್ನು ಸುಲಭಗೊಳಿಸಲು ವಿಶೇಷ ವ್ಯವಸ್ಥೆ ಮಾಡಲಾಗಿದೆ. 'ಅಂಬಾರಿ' ಬಸ್ ಮೂಲಕ ದೀಪಾಲಂಕಾರ ವೀಕ್ಷಣೆಯ ಜೊತೆಗೆ, ಮೈಸೂರು ಮತ್ತು ಸುತ್ತಮುತ್ತಲಿನ ಪ್ರಮುಖ ಪ್ರವಾಸಿ ತಾಣಗಳಿಗೆ ಏಖಖಿಆಅ ವಿಶೇಷ ಪ್ಯಾಕೇಜ್‌ಗಳನ್ನು ರೂಪಿಸಿದೆ ಎಂದರು.

# ಮೈಸೂರು ದಸರಾಕ್ಕೆ 146 ಕಿ.ಮೀ. ದೀಪಾಲಂಕಾರ; 3,500 ಡ್ರೋನ್‌ಗಳ ಪ್ರದರ್ಶನ: ಇಂಧನ ಸಚಿವ ಕೆ.ಜೆ. ಜಾರ್ಜ್

**ಬೆಂಗಳೂರು:** ವಿಶ್ವವಿಖ್ಯಾತ ಮೈಸೂರು ದಸರಾ–2026ರ ಅಂಗವಾಗಿ ಈ ಬಾರಿ ಮೈಸೂರು ನಗರವನ್ನು ಇನ್ನಷ್ಟು ಆಕರ್ಷಕವಾಗಿ ಕಂಗೊಳಿಸಲು ಒಟ್ಟು 146 ಕಿ.ಮೀ. ರಸ್ತೆ ವ್ಯಾಪ್ತಿಯಲ್ಲಿ ಭವ್ಯ ವಿದ್ಯುತ್ ದೀಪಾಲಂಕಾರ ಕೈಗೊಳ್ಳಲಾಗುತ್ತಿದೆ ಎಂದು ಇಂಧನ ಮತ್ತು ಪ್ರವಾಸೋದ್ಯಮ ಸಚಿವ ಕೆ.ಜೆ. ಜಾರ್ಜ್ ತಿಳಿಸಿದ್ದಾರೆ.



ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ವತಿಯಿಂದ ನಗರದ 199 ರಸ್ತೆಗಳು, 123 ವೃತ್ತಗಳು ಹಾಗೂ 80 ವಿವಿಧ ಪ್ರತಿಕೃತಿಗಳಿಗೆ ವಿಶೇಷ ವಿನ್ಯಾಸದ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದೆ. ದೀಪಾಲಂಕಾರ ವ್ಯವಸ್ಥೆ ಅಕ್ಟೋಬರ್ 11ರಿಂದ ಅಕ್ಟೋಬರ್ 31ರವರೆಗೆ ಒಟ್ಟು 21 ದಿನಗಳ ಕಾಲ ಕಾರ್ಯನಿರ್ವಹಿಸಲಿದೆ.

ಈ ಬಾರಿ ದಸರಾ ದೀಪಾಲಂಕಾರದ ಜೊತೆಗೆ 3,500 ಎಲ್‌ಇಡಿ ಡ್ರೋನ್‌ಗಳನ್ನು ಬಳಸಿ ನಾಲ್ಕು ದಿನ ವಿಶೇಷ ಡ್ರೋನ್ ಪ್ರದರ್ಶನ ಆಯೋಜಿಸಲು ಯೋಜಿಸಲಾಗಿದೆ. ಅಕ್ಟೋಬರ್ 17, 18, 20 ಮತ್ತು 21ರಂದು ರಾತ್ರಿ 8 ಗಂಟೆಗೆ ಡ್ರೋನ್ ಪ್ರದರ್ಶನ ನಡೆಯಲಿದೆ.

3,500 ಡ್ರೋನ್‌ಗಳನ್ನು ಏಕಕಾಲದಲ್ಲಿ ಬಳಸಿಕೊಂಡು ರಾಷ್ಟ್ರಪಕ್ಷಿ ನವಿಲಿನ ಬೃಹತ್ ಆಕೃತಿಯನ್ನು ಆಕಾಶದಲ್ಲಿ ಮೂಡಿಸಿ ಗಿನ್ನಿಸ್ ದಾಖಲೆಗೆ ಪ್ರಯತ್ನಿಸುವ ಯೋಜನೆಯೂ ಈ ಬಾರಿಯ ಪ್ರಮುಖ ಆಕರ್ಷಣೆಯಾಗಲಿದೆ.

ಮೈಸೂರು ದಸರಾ ಕೇವಲ ಸಾಂಸ್ಕೃತಿಕ ಉತ್ಸವವಲ್ಲ; ಕರ್ನಾಟಕದ ಪರಂಪರೆ ಮತ್ತು ಪ್ರವಾಸೋದ್ಯಮವನ್ನು ದೇಶ–ವಿದೇಶಕ್ಕೆ ಪರಿಚಯಿಸುವ ದೊಡ್ಡ ವೇದಿಕೆಯಾಗಿದೆ. ಈ ಬಾರಿ ದೀಪಾಲಂಕಾರವನ್ನು ಮತ್ತಷ್ಟು ವಿಶಾಲ ಮತ್ತು ಆಕರ್ಷಕವಾಗಿ ರೂಪಿಸಲಾಗುತ್ತಿದೆ. ನಗರದ ಪ್ರಮುಖ ರಸ್ತೆಗಳು, ವೃತ್ತಗಳು ಮತ್ತು ಪ್ರತಿಕೃತಿಗಳೊಂದಿಗೆ ಡ್ರೋನ್ ಪ್ರದರ್ಶನವೂ ಪ್ರವಾಸಿಗರಿಗೆ ವಿಭಿನ್ನ ಅನುಭವ ನೀಡಲಿದೆ," ಎಂದು ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ದಸರಾಕ್ಕೆ ಬರುವ ಪ್ರವಾಸಿಗರು ಹಗಲಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ರಾತ್ರಿ ವೇಳೆ ಮೈಸೂರಿನ ದೀಪಾಲಂಕಾರದ ವೈಭವವನ್ನೂ ಅನುಭವಿಸಬೇಕು. ಸುರಕ್ಷತೆ, ವಿದ್ಯುತ್ ಪೂರೈಕೆ ಮತ್ತು ವ್ಯವಸ್ಥಿತ ನಿರ್ವಹಣೆಗೆ ಆದ್ಯತೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದರು.

ದಸರಾ ದೀಪಾಲಂಕಾರಕ್ಕಾಗಿ ತಾತ್ಕಾಲಿಕವಾಗಿ 3,106 ಕೆವಿಎ ವಿದ್ಯುತ್ ಭಾರ ವ್ಯವಸ್ಥೆ ಮಾಡಲಾಗಿದ್ದು, ಒಟ್ಟು 2,60,920 ಯೂನಿಟ್ ವಿದ್ಯುತ್ ಬಳಕೆ ಅಂದಾಜಿಸಲಾಗಿದೆ. ದೀಪಾಲಂಕಾರ ಕಾಮಗಾರಿಗೆ 250 ಲಕ್ಷ ರೂ. ಅಂದಾಜು ವೆಚ್ಚ ನಿಗದಿಪಡಿಸಲಾಗಿದೆ.

# ನೋಯ್ಡಾ ವಿಮಾನ ನಿಲ್ದಾಣ ಇನ್ಮುಂದೆ ನರೇಂದ್ರ ಮೋದಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್

## ಸಿಎಂ ಯೋಗಿ ಆದಿತ್ಯನಾಥ್ ಘೋಷಣೆ

**ಲಖನೌ:** ಉತ್ತರ ಪ್ರದೇಶದ ನೋಯ್ಡಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರನ್ನು ಬದಲಾಯಿಸಲಾಗಿದ್ದು, ಇನ್ನು ಮುಂದೆ ದೇಶದ ಪ್ರಧಾನಿ ನರೇಂದ್ರ ಮೋದಿ ಅವರ ಹೆಸರಿನಲ್ಲಿ ಕಂಗೊಳಿಸಲಿದೆ.




ಜೆವಾರ್ ವಿಮಾನ ನಿಲ್ದಾಣಕ್ಕೆ ನರೇಂದ್ರ ಮೋದಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್, ನೋಯ್ಡಾ–ಜೆವಾರ್ ಎಂದು ಮರುನಾಮಕರಣ ಮಾಡುವ ಪ್ರಸ್ತಾವನೆಗೆ ಉತ್ತರ ಪ್ರದೇಶ ಸಂಪುಟ ಅಧಿಕೃತ ಒಪ್ಪಿಗೆ ನೀಡಿದೆ ಎಂದು ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶುಕ್ರವಾರ (ಅ.09) ಪ್ರಕಟಿಸಿದ್ದಾರೆ.

ರಾಜಧಾನಿ ಲಖನೌದಲ್ಲಿ ನಡೆದ ಸಚಿವ ಸಂಪುಟ ಸಭೆಯ ಬಳಿಕ ಮಾತನಾಡಿದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ರಾಜ್ಯಕ್ಕೆ ಈ ಬೃಹತ್ ವಿಮಾನ ನಿಲ್ದಾಣವನ್ನು ಉಡುಗೊರೆಯಾಗಿ ನೀಡಿದ್ದಕ್ಕಾಗಿ ಪ್ರಧಾನಿ ಮೋದಿಯವರಿಗೆ ಸಂಪುಟವು ಧನ್ಯವಾದ ಅರ್ಪಿಸಿದೆ ಎಂದು ತಿಳಿಸಿದರು. ಪ್ರಧಾನಿಯವರ 25 ವರ್ಷಗಳ ಸಾರ್ಥಕ ಸಾರ್ವಜನಿಕ ಸೇವೆಯ ಮೈಲಿಗಲ್ಲನ್ನು ಗೌರವಿಸುವ ಸಲುವಾಗಿ ಈ ಮರುನಾಮಕರಣದ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಯೋಗಿ ಆದಿತ್ಯನಾಥ್ ಅವರು ಸ್ಪಷ್ಟಪಡಿಸಿದರು.

ಜೆವಾರ್‌ನಲ್ಲಿ ನಿರ್ಮಾಣವಾಗಿರುವ ಈ ವಿಮಾನ ನಿಲ್ದಾಣವು ಉತ್ತರ ಪ್ರದೇಶದ ಅತಿ ದೊಡ್ಡ ಏರ್‌ಪೋರ್ಟ್ ಆಗಿದ್ದು, ಭವಿಷ್ಯದಲ್ಲಿ ಇದು ಭಾರತದ ಅತಿ ದೊಡ್ಡ ವಾಯುಯಾನ ಕೇಂದ್ರವಾಗಿ ರೂಪುಗೊಳ್ಳಲಿದೆ ಎಂದು ಯೋಗಿ ಆದಿತ್ಯನಾಥ್ ಬಣ್ಣಿಸಿದರು. ಪ್ರಧಾನಿ ಮೋದಿ ಹಾಗೂ ಉತ್ತರ ಪ್ರದೇಶದ ನಡುವಿನ ಸಂಬಂಧ ಅತ್ಯಂತ ಆಳವಾದದ್ದು ಮತ್ತು ವೈಯಕ್ತಿಕವಾದದ್ದು ಎಂದು ಯೋಗಿ ಅಭಿಪ್ರಾಯಪಟ್ಟರು. ಈ ವಿಮಾನ ನಿಲ್ದಾಣದ ಕನಸು 2001ರಲ್ಲಿ ಅಂದಿನ ಮುಖ್ಯಮಂತ್ರಿ ರಾಜನಾಥ್ ಸಿಂಗ್ ಅವರ ಕಾಲದಲ್ಲಿ ರೂಪುಗೊಂಡಿತ್ತು.

ನಂತರ ನವೆಂಬರ್ 25, 2021 ರಂದು ಪ್ರಧಾನಿ ನರೇಂದ್ರ ಮೋದಿ ಅವರು ಈ ಯೋಜನೆಯ ಶಂಕುಸ್ಥಾಪನೆ ನೆರವೇರಿಸಿದ್ದರು. ಇದರ ಜೊತೆಗೆ, ಇದರ ಮೊದಲ ಹಂತದ ಕಾಮಗಾರಿಯನ್ನು ಮಾರ್ಚ್ 28, 2026 ರಂದು ಪ್ರಧಾನಿಯವರೇ ಅಧಿಕೃತವಾಗಿ ಲೋಕಾರ್ಪಣೆಗೊಳಿಸಿದ್ದರು.

ಸಾರ್ವಜನಿಕ–ಖಾಸಗಿ ಸಹಭಾಗಿತ್ವ ಮಾದರಿಯಡಿ ಸುಮಾರು 11,200 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆಯೊಂದಿಗೆ ಮೊದಲ ಹಂತವನ್ನು ನಿರ್ಮಿಸಲಾಗಿದೆ. ಆರಂಭಿಕ ಹಂತದಲ್ಲಿ ಇದು ವಾರ್ಷಿಕ 1.2 ಕೋಟಿ (12 ಮಿಲಿಯನ್) ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದ್ದು, ಸಂಪೂರ್ಣ ಅಭಿವೃದ್ಧಿಯ ಬಳಿಕ ಇದು 7 ಕೋಟಿಗೆ (70 ಮಿಲಿಯನ್) ವಿಸ್ತರಣೆಯಾಗಲಿದೆ.

ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಜೊತೆಗೆ, ಇದು ದೆಹಲಿ–ಎನ್‌ಸಿಆರ್ ಪ್ರದೇಶದ ಎರಡನೇ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಕಾರ್ಯನಿರ್ವಹಿಸಲಿದೆ. ಇದರೊಂದಿಗೆ ಅತ್ಯಾಧುನಿಕ ಮಲ್ಟಿ–ಮೋಡಲ್ ಕಾರ್ಗೋ ಹಬ್, ಸಂಯೋಜಿತ ಕಾರ್ಗೋ ಟರ್ಮಿನಲ್ ಹಾಗೂ ಲಾಜಿಸ್ಟಿಕ್ಸ್ ವಲಯಗಳನ್ನು ಇದು ಒಳಗೊಂಡಿದೆ. ಸ್ವಿಟ್ಜರ್ಲೆಂಡ್‌ನ ಜ್ಯೂರಿಚ್ ಏರ್‌ಪೋರ್ಟ್ ಇಂಟರ್‌ನ್ಯಾಷನಲ್ AG ಸಂಸ್ಥೆಯು ಇದರ ರಿಯಾಯಿತಿದಾರರಾಗಿದ್ದಾರೆ.

## ಸೌದಿ ಮೇಲೆ ಹೂತಿ ಕ್ಷಿಪಣಿ ದಾಳಿ

# ರಿಯಾದ್ ವಿಮಾನ ನಿಲ್ದಾಣಕ್ಕೆ ಅಪ್ಪಳಿಸಿದ ಮಿಸೈಲ್

**ಸೌದಿ ಅರೇಬಿಯಾ:** ಕಳೆದ ಕೆಲ ದಿನಗಳಿಂದ ಸೌದಿ ಅರೇಬಿಯಾ ಹಾಗೂ ಒಮನ್ ಬೆಂಬಲಿತ ಹೂತಿ ಬಂಡುಕೋರ ನಡುವಿನ ಸಂಘರ್ಷಕ್ಕೇರಿದ್ದು, ರಿಯಾದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಹೂತಿ ಬಂಡು–ಕೋರರು ವೈಮಾನಿಕ ದಾಳಿ ನಡೆಸಿ ಪರಿಣಾಮ ವಿಮಾನ ಹಾರಟಕ್ಕೆ ಸೌದಿ ಸರ್ಕಾರ ನಿರ್ಬಂಧ ಹೇರಿದೆ ಎಂದು ವರದಿಯಾಗಿದೆ.



ಈ ದಾಳಿಯಲ್ಲಿ ಯಾವುದೇ ಪ್ರಾಣಹಾನಿಯಾಗಿಲ್ಲ ಎಂದು ಸೌದಿ ಅರೇಬಿಯಾ ಹೇಳುತ್ತಿದ್ದರೂ, ಕೆಲ ಅಂತಾರಾಷ್ಟ್ರೀಯ ಮಾಧ್ಯಮಗಳು ಮೂರು ಜನರ ನಾಗರಿಕರು ಸಾವನ್ನಪ್ಪಿದ್ದಾರೆಂದು ಹೇಳುತ್ತಿವೆ. ಸೌದಿ ಅರೇಬಿಯಾದಲ್ಲಿ ಪರಿಸ್ಥಿತಿ ಉದ್ವಿಗ್ನವಾದ ಹಿನ್ನಲೆ, ರಿಯಾದ್‌ಗೆ ಪ್ರಯಾಣ ಬೆಳೆಸಿದ್ದ ಸುಮಾರು 30 ಕ್ಕೂ ಅಧಿಕ ಅಂತರಾಷ್ಟ್ರೀಯ ವಿಮಾನಗಳು ತಮ್ಮ ಹಾರಾಟವನ್ನು ರದ್ದುಪಡಿಸಿದ್ದಾಗಿ ತಿಳಿದದು ಬಂದಿದೆ.

ಕೆಲ ಪಾಶ್ಚಿಮಾತ್ಯ ಮಾಧ್ಯಮಗಳ ಪ್ರಕಾರ, ಹೂತಿಗಳ ಮೂಲಕ ಪ್ರಯೋಗಿಸಲ್ಪಟ್ಟ ಮಿಸೈಲ್, ರಿಯಾದ್ ಏರ್‌ಪೋರ್ಟ್‌ನಲ್ಲಿದ್ದ ವಾಣಿಜ್ಯ ವಿಮಾನವೊಂದಕ್ಕೆ ಬಡಿದಿದ್ದು, ಇದರ ಆಸುಪಾಸಿನಲ್ಲಿದ್ದ ಮೂವರು ಸಾವನ್ನಪ್ಪಿದ್ದಾರೆಂದು ಹೇಳುತ್ತಿವೆ. ಈ ಕುರಿತಂತೆ ಕೆಲ ಫೋಟೊಗಳು ಸಹ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ಸೌದಿ ಅರೇಬಿಯಾ ಮಿಸೈಲ್ ದಾಳಿ ತಡೆಯುವಲ್ಲಿ ವಿಫಲವಾಗಿದೆ ಎಂದು ಹೇಳಲಾಗುತ್ತಿದೆ.

ಆದರೆ, ಈ ಆರೋಪಗಳನ್ನು ತಳ್ಳಿ ಹಾಕಿರುವ ಸೌದಿ ಸರ್ಕಾರ, ಮಿಸೈಲ್ ನಮ್ಮ ವಿಮಾನ ನಿಲ್ದಾಣಕ್ಕಲ್ಲ, ಬದಲಿಗೆ ಮೆಡಿಕಲ್ ಕಾಂಪ್ಲೆಂಕ್ಸ್‌ವೊಂದಕ್ಕೆ ಬಡಿದಿದೆ. ಆದರೆ ಯಾವುದೇ ಸಾವು ನೋವು ಸಂಭವಿಸಿಲ್ಲ. ನಮ್ಮ ಮೇಲೆ ಹೂತಿಗಳು ನಿರಂತರ ವೈಮಾನಿಕ ದಾಳಿ ನಡೆಸುತ್ತಿರುವ ಹಿನ್ನಲೆಯಲ್ಲಿ ವಿಮಾನಯಾನಕ್ಕೆ ನಿಷೇಧ ಹೇರಿದ್ದಾಗಿ ಸ್ಪಷ್ಟನೆ ನೀಡಿದೆ.

ಹೂತಿಗಳು ಸೌದಿ ಅರೇಬಿಯಾ ಮೇಲೆ ದಾಳಿ ಆರಂಭಿಸುವ ಕೆಲ ತಿಂಗಳುಗಳ ಹಿಂದೆ, ಪಾಕಿಸ್ತಾನ, ಸೌದಿ ಅರೇಬಿಯಾ ಹಾಗೂ ಟರ್ಕಿ ದೇಶಗಳು ನ್ಯಾಟೋ ಮಾದರಿಯಲ್ಲಿ ಇಸ್ಲಾಮಿಕ್ ಮೈತ್ರಿ ಮಾಡಿಕೊಂಡಿದ್ದು, ಇದಕ್ಕೆ ಮೆಕ್ಕಾ ಒಪ್ಪಂದ ಎಂಬ ಹೆಸರನ್ನು ನೀಡಿದ್ದರು. ಈ ಒಪ್ಪಂದದ ಪ್ರಕಾರ, ಮೂರು ದೇಶದಲ್ಲಿ ಯಾವುದೇ ಒಂದು ದೇಶದ ಮೇಲೆ ಮಿಲಿಟರಿ ದಾಳಿ ಸಂಭವಿಸಿದರೆ, ಉಳಿದೆರಡು ದೇಶಗಳು ತಕ್ಷಣ ಸಹಾಯಕ್ಕೆ ದಾವಿಸುವುದೇ ಈ ಮೈತ್ರಿಕೂಟದ ಸ್ಥಾಪನೆ ಉದ್ದೇಶವಾಗಿತ್ತು.

ಆದರೆ, ಒಪ್ಪಂದ ಕೂಡಿಬಂದ ಕೆಲವೇ ತಿಂಗಳನಲ್ಲಿ ಹೂತಿಗಳು ಸೌದಿ ಅರೇಬಿಯಾ ಮೇಲೆ ದಾಳಿ ನಡೆಸಿದರೂ, ಪಾಕಿಸ್ತಾನವಾಗಲೀ, ಟರ್ಕಿಯಾಗಲೀ ಸಹಾಯಕ್ಕೆ ಬರದಿದ್ದದ್ದು, ಅಂತಾರಾಷ್ಟ್ರೀಯ ಮಟ್ಟದಲ್ಲಿ ತೀವ್ರ ಚರ್ಚೆಗೆ ದಾರಿಮಾಡಿ ಕೊಟ್ಟಿತ್ತು.

ನಂತರ, ಮತ್ತೊಮ್ಮೆ ಈ ಮೂರು ದೇಶದ ಉನ್ನತ ಮಟ್ಟದ ನಾಯಕರು ಸಭೆ ನಡೆಸಿ, ಸೌದಿ ಬೆಂಬಲಕ್ಕೆ ನಾವಿದ್ದು (ಪಾಕಿಸ್ತಾಮ, ಟರ್ಕಿ), ಕೆಲವೇ ದಿಗನಳಲ್ಲಿ ನಮ್ಮ ಸೈನಿಕರು ಸೌದಿ ತಲುಪಿ, ಹೂರತಿಗಳನ್ನು ಮಟ್ಟಹಾಕುತ್ತಾರೆಂದು ಪಾಕಿಸ್ತಾನ ಮತ್ತು ಟರ್ಕಿ ಹೇಳಿಕೊಂಡಿತ್ತು. ಆದರೆ ಈಗ ಮತ್ತೊಮ್ಮೆ ಸೌದಿ ಮೇಲೆ ದಾಳಿ ನಡೆದಿದ್ದು, ಈ ಇಸ್ಲಾಮಿಕ್ ಮೈತ್ರಿಕೂಟ ಮುಂದಿನ ದಿನಗಳಲ್ಲಿ ಏನು ಮಾಡಲಿದೆ ಎನ್ನುವುದು ಜಗತ್ತನ ಕುತೂಹಲಕ್ಕೆ ಕಾರಣವಾಗಿದೆ

# ಸಾಫ್ಟ್‌ವೇರ್ ಇಂಜಿನಿಯರ್‌ಗೆ 3.97 ಲಕ್ಷ ರೂ. ಸೈಬರ್ ವಂಚನೆ

**ಕಲಬುರಗಿ:** ಸಾಫ್ಟ್‌ವೇರ್ ಇಂಜಿನಿಯರ್ ಒಬ್ಬರಿಗೆ 3,97,626 ರೂ.ಸೈಬರ್ ವಂಚನೆ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ನಗರದ ಮಹಾಲಕ್ಷ್ಮಿ ಲೇಔಟ್ ನಿವಾಸಿಯಾಗಿರುವ ಸಾಫ್ಟ್‌ವೇರ್ ಇಂಜಿನಿಯರ್ ದತ್ತರಾಜ ಹಿರೇಮಠ ಅವರಿಗೆ ವಂಚನೆ ಮಾಡಲಾಗಿದೆ.

ಇವರ ಮೊಬೈಲ್ ನಂಬರ್‌ಗೆ ಅಪರಿಚಿತ ಸೈಬರ್ ವಂಚಕನೊಬ್ಬ ಎಪಿಕೆ ಫೈಲ್ ಲಿಂಕ್ ಕಳುಹಿಸಿ ಮೊಬೈಲ್ ಹ್ಯಾಕ್ ಮಾಡಿ ಇವರ ಬ್ಯಾಂಕ್ ಖಾತೆಯಿಂದ ಹಂತ ಹಂತವಾಗಿ 3,97,626 ರೂ.ವರ್ಗಾವಣೆ ಮಾಡಿಕೊಂಡು ವಂಚನೆ ಮಾಡಿದ್ದು,

ದತ್ತರಾಜ ಅವರು ಈ ಸಂಬಂಧ ಇಲ್ಲಿನ ಸೈಬರ್ ಕ್ರೈಂ ಪೊಲೀಸ್ ಠಾಣೆಯಲ್ಲಿ ವಂಚಕನ ವಿರುದ್ಧ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

# ಎಲ್ಲವನ್ನೂ ತಡೆಯಲು ಸಾಧ್ಯವಿಲ್ಲ: ಸಿಜೆಪಿ ದೆಹಲಿ ಪ್ರತಿಭಟನೆಗೆ ನಿರ್ಬಂಧ ಕುರಿತು ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಚಾಟಿ

**ನವದೆಹಲಿ:** ಕಾಕ್ರೋಚ್ ಜನತಾ ಪಾರ್ಟಿ ಶನಿವಾರ ಹಮ್ಮಿಕೊಂಡಿರುವ ಬೃಹತ್ ಪ್ರತಿಭಟನೆಯ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ವಿಧಿಸಲಾಗಿರುವ ವಿಪರೀತ ನಿರ್ಬಂಧಗಳ ಕುರಿತು ಸುಪ್ರೀಂ ಕೋರ್ಟ್ ಶುಕ್ರವಾರ ಕೇಂದ್ರ ಸರ್ಕಾರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.



ನಗರದ ವಿವಿಧ ಭಾಗಗಳಿಗೆ ಜನರು ಸಂಚರಿಸುವುದರಿಂದ ಎಲ್ಲವನ್ನೂ ಬಂದ್ ಮಾಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್, ಕೇಂದ್ರಕ್ಕೆ ತಿಳಿಸಿದ್ದು, ಪ್ರಯಾಣಿಕರ ಕುರಿತು ತೀವ್ರ ಕಳವಳವನ್ನು ವ್ಯಕ್ತಪಡಿಸಿದೆ.

ಯುವಕರು ಮತ್ತು ವೃದ್ಧರು ಸೇರಿದಂತೆ ಎಲ್ಲರೂ ಸಂಚರಿಸುತ್ತಾರೆ. ಪ್ರಯಾಣಿಕರಿಗೆ ಮೂಲಭೂತ ಸೌಲಭ್ಯಗಳನ್ನು ಪಡೆಯುವ ಹಕ್ಕಿದೆ ಎಂದು ನ್ಯಾಯಾಲಯವು ಕೇಂದ್ರದ ಪರ ವಕೀಲರಿಗೆ ಹೇಳಿದ್ದು, ಮುಚ್ಚಲಾದ ಮೆಟ್ರೋ ನಿಲ್ದಾಣಗಳ ಸಂಖ್ಯೆಯನ್ನು ಕಡಿಮೆ ಮಾಡುವಂತೆ ಸೂಚಿಸಿದೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಎಂ.ಎ. ಬೇಬಿ ಅವರು ಮೆಟ್ರೋ ನಿಲ್ದಾಣ ಬಂದ್ ಮಾಡಿರುವುದನ್ನು ಮತ್ತು ರೈಲುಗಳ ರದ್ದತಿಯ ವಿರುದ್ಧ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಎಲ್ಲಾ ರೈಲುಗಳನ್ನು ರದ್ದುಗೊಳಿಸಲಾಗಿದೆ, ಮೆಟ್ರೋ ನಿಲ್ದಾಣಗಳನ್ನು ಮುಚ್ಚಲಾಗಿದೆ. ಎಲ್ಲಿಗೂ ಹೋಗಲು ಸಾಧ್ಯವಾಗುತ್ತಿಲ್ಲ. ನನ್ನ ದೇಶಕ್ಕೆ ಏನಾಗುತ್ತಿದೆ ಇದೊಂದು ಶಾಂತಿಯುತ ಪ್ರತಿಭಟನೆ ಎಂದು ಅರ್ಜಿದಾರರ ಪರವಾಗಿ ವಾದ ಮಂಡಿಸಿದ ಹಿರಿಯ ವಕೀಲ ಹಾಗೂ ಸಂಸದ ಕಪಿಲ್ ಸಿಬಲ್ ನ್ಯಾಯಾಲಯಕ್ಕೆ ತಿಳಿಸಿದರು.

# ಪ್ರಜ್ವಲ್ ರೇವಣ್ಣ ಹಿಂಡಲಗಾ ಜೈಲಿಗೆ ಶಿಫ್ಟ್: ಪರಪ್ಪನ ಅಗ್ರಹಾರದಲ್ಲಿ ಮೊಬೈಲ್ ಪತ್ತೆ ಬೆನ್ನಲ್ಲೇ ಡಿಜಿಪಿ ಅಲೋಕ್‌ಕುಮಾರ್ ಖಡಕ್ ಆಕ್ಷನ್



**ಬೆಂಗಳೂರು:** ಅತ್ಯಾಚಾರ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರನ್ನು ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಿಂದ, ಬೆಳಗಾವಿಯ ಹಿಂಡಲಗಾ ಜೈಲಿಗೆ ಸ್ಥಳಾಂತರ ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ಕೆಲ ದಿನಗಳ ಹಿಂದೆ, ಪರಪ್ಪರ ಅಗ್ರಹಾರದ ಮೇಲೆ ಕೇಂದ್ರ ಅಪರಾಧ ವಿಭಾಗದ (ಸಿಸಿಬಿ) ಪೊಲೀಸ್ ತಂಡ ದಾಳಿ ನಡೆಸಿದ ಸಂದರ್ಭದಲ್ಲಿ ಪ್ರಜ್ವಲ್ ರೇವಣ್ಣ ಬಳಿ ಮೊಬೈಲ್ ಫೋನ್ ಪತ್ತೆಯಾಗಿದೆ ಎಂದು ಹೇಳಲಾಗಿತ್ತು. ಈ ಹಿನ್ನಲೆಯಲ್ಲಿ ಕಾರಾಗೃಹ ಇಲಾಖೆ ಡಿಜಿಪಿ ಅಲೋಕ್ ಕುಮಾರ್, ಮಾಜಿ ಸಂಸದರನ್ನು ಬೆಂಗಳೂರಿನಿಂದ ಬೆಳಗಾವಿಗೆ ವರ್ಗಾವಣೆ ಮಾಡಿದ್ದಾರೆ ಎನ್ನಲಾಗುತ್ತಿದೆ.

ಹೀಗಾಗಿ, ಡಿಜಿಪಿ ಅಲೋಕ್ ಕುಮಾರ್, ಹಿಂಡಲಗಾ ಜೈಲಿನ ಅಧೀಕ್ಷಕರಿಗೆ ಈ ಬಗ್ಗೆ ಮಾಹಿತಿ ತಲುಪಿಸಿದ್ದು, ಯಾವುದೇ ಕ್ಷಣದಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಪರಪ್ಪನ ಅಗ್ರಹಾರದಿಂದ, ಬೆಳಗಾವಿಯ ಹಿಂಡಲಗಾ ಜೈಲಿಗೆ ಶಿಫ್ಟ್ ಮಾಡಲಿದ್ದು, ಇದಕ್ಕೆ ತಕ್ಕಂತೆ ತಯಾರಿ ನಡೆಸಿಕೊಳ್ಳುವಂತೆ ನಿರ್ದೇಶಿಸಿದ್ದಾರೆ.

ಕೆಲ ದಿನಗಳ ಹಿಂದೆ ಸಿಸಿಬಿ ಪೊಲೀಸರು ಪ್ರಜ್ವಲ್ ರೇವಣ್ಣ ಅವರ ಸೆಲ್‌ನಲ್ಲಿ ಪರಿಶೀಲನೆ ನಡೆಸಿದ್ದ ಸಂದರ್ಭದಲ್ಲಿ ಮೊಬೈಲ್ ಫೋನ್, ಚಾರ್ಜರ್ ಹಾಗೂ ಪೆನ್ ಡ್ರೈವ್‌ಗಳು ಪತ್ತೆಯಾಗಿದ್ದು, ಜೈಲಾಡಳಿತದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಹುಟ್ಟಿ ಹಾಕಿದ್ದವು.

ಪ್ರಜ್ವಲ್ ರೇವಣ್ಣ ಜೊತೆಗೆ ಸುಪ್ರೀಂ ಕೋರ್ಟ್‌ನಲ್ಲಿ ನಕಲಿ ದಾಖಲೆ ಸೃಷ್ಟಿಸಿದ ಆರೋಪ ಹೊತ್ತಿರುವ ಆರೋಪಿ ಶಂಕರ್‌ನನ್ನು ಕೂಡ ಬಳ್ಳಾರಿ ಜಿಲ್ಲೆಗೆ ಸ್ಥಳಾಂತರ ಮಾಡಲಾಗುತ್ತಿದೆ. ಅಂತಯೇ, ಇನ್ನು ಕೆಲವು ಆರೋಪಿಗಳನ್ನು ಬೇರೆ–ಬೇರೆ ಜಿಲ್ಲೆಯ ಜೈಲುಗಳಿಗೆ ವರ್ಗಾವಣೆ ಮಾಡಲಾಗುತ್ತಿದೆ ಎಂದು ತಿಳಿದು ಬಂದಿದೆ.

ಸಿಸಿಬಿ ಪೊಲೀಸರ ದಾಳಿಯಲ್ಲಿ ಜೈಲಿನ ಮಿತಿಯಲ್ಲಿ ಇರಬಾರದ ವಸ್ತುಗಳು ದೊರೆತ ಹಿನ್ನಲೆ ಕಾರಾಗೃಹ ಸಿಬ್ಬಂದಿಗಳಿಗೆ ತೀವ್ರ ಮುಖಭಂಗ ಉಂಟಾಗಿದ್ದು, ಇದನ್ನು ಸರಿ ಪಡಿಸಿಕೊಳ್ಳಲು ಇದೀಗ ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ

# ಇಂದಿನಿಂದ ಕನಕದುರ್ಗಮ್ಮ ದೇವಸ್ಥಾನದಲ್ಲಿ ದಸರಾ ನವರಾತ್ರಿ ಉತ್ಸವ: ಪೂಜಾರಿ ಗಾದೆಪ್ಪ

(1ನೇ ಪುಟದಿಂದ)

**ಪ್ರತಿದಿನ ದೇವಿಗೆ ನವದುರ್ಗೆಯರ ವಿಶೇಷ ಅಲಂಕಾರ :** ಅ.11ರಂದು ಶೈಲಪುತ್ರಿ ಅಲಂಕಾರ, ಅ.12ರಂದು ಬ್ರಹ್ಮಚಾರಿಣಿ ಅಲಂಕಾರ, ಅ.13ರಂದು ಚಂದ್ರಘಂಟಾ ಅಲಂಕಾರ, ಅ.14ರಂದು ಕೂಷ್ಮಾಂಡಾ ಅಲಂಕಾರ, ಅ.15ರಂದು ಸ್ಕಂದಮಾತಾ ಅಲಂಕಾರ, ಅ.16ರಂದು ಕಾತ್ಯಾಯಿನಿ ಅಲಂಕಾರ, ಅ.17ರಂದು ಕಾಲರಾತ್ರಿ ಅಲಂಕಾರ, ಅ.18ರಂದು ಮಹಾಗೌರಿ ಅಲಂಕಾರ, ಅ.19ರಂದು ಸಿದ್ಧಿದಾತ್ರಿ ಅಲಂಕಾರ, ಅ.20ರಂದು ಸರಸ್ವತಿ ಅಲಂಕಾರ ಹಾಗೂ ಅ.21ರಂದು ಆದಿಶಕ್ತಿ ಅಲಂಕಾರಗಳೊಂದಿಗೆ ದೇವಿಗೆ ವಿಶೇಷ ಪೂಜೆ ಸಲ್ಲಿಸಲಾಗುವುದು ಎಂದು ಅವರು ತಿಳಿಸಿದರು

ಕರ್ನಾಟಕ ಸರ್ಕಾರದ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ವ್ಯಾಪ್ತಿಯಲ್ಲಿರುವ ಶ್ರೀ ಕನಕದುರ್ಗಮ್ಮ ದೇವಸ್ಥಾನದ ವತಿಯಿಂದ ನಡೆಯುವ ಈ ನವರಾತ್ರಿ ಮಹೋತ್ಸವದಲ್ಲಿ ನಗರದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರು ಪಾಲ್ಗೊಂಡು ಉತ್ಸವವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ವಿಜಯದಶಮಿಯಂದು ಸಂಜೆ 6 ಗಂಟೆಗೆ ಶ್ರೀ ಕನಕದುರ್ಗಮ್ಮ ದೇವಿಯ ಪ್ರಧಾನ ಪಲ್ಲಕ್ಕಿ ಉತ್ಸವ ನಡೆಯಲಿದೆ. ಈ ಸಂದರ್ಭದಲ್ಲಿ ದೇವಿಯ ಮೆರವಣಿಗೆಯನ್ನು ವೈಭವದಿಂದ ನಡೆಸಲು ವ್ಯವಸ್ಥೆ ಮಾಡಲಾಗುತ್ತಿದೆ. ರಾವಣ ದಹನದ ಬದಲಿಗೆ ಪಟಾಕಿ ಸಿಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಉತ್ಸವದ ಅವಧಿಯಲ್ಲಿ ನೆರೆದ ಭಕ್ತರಿಗೆ ಪ್ರತಿದಿನ ಅನ್ನಪ್ರಸಾದ ಏರ್ಪಾಡು ಮಾಡಲಾಗಿದೆ ಎಂದು ತಿಳಿಸಿದರು .

ಪತ್ರಿಕಾಗೋಷ್ಠಿಯಲ್ಲಿ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ (ಇಒ) ಸೆಲ್ವಮಣಿ, ರಾಮಾಂಜನೇಯಲು, ಲಕ್ಷ್ಮಣ, ವಿಜಯಕುಮಾರ್, ರಾಮಾಂಜಿನಿ ಕೌಶಿಕ್ ಸೇರಿದಂತೆ ಇತರರಿದ್ದರು.

# ಮೂರು ವರ್ಷ ಕಳೆದರೂ ಪೂರ್ಣಗೊಳ್ಳದ ಅಂಗನವಾಡಿ ಕಟ್ಟಡ

(1ನೇ ಪುಟದಿಂದ)

ಜೂಜಾಟ ಸೇರಿದಂತೆ ಅಕ್ರಮ ಚಟುವಟಿಕೆಗಳು ರಾಜಾರೋಷವಾಗಿ ನಡೆಯುತ್ತಿವೆ. ಶಾಲಾ ಆವರಣದ ಸಮೀಪದಲ್ಲೇ ಇಂತಹ ವಾತಾವರಣ ನಿರ್ಮಾಣವಾಗಿರುವುದು ಗ್ರಾಮಸ್ಥರು ಹಾಗೂ ಪೋಷಕರಲ್ಲಿ ತೀವ್ರ ಆತಂಕ ಮೂಡಿಸಿದೆ.

**ಅಧಿಕಾರಿಗಳೇ ಇತ್ತ ಗಮನಹರಿಸಿ**

ಗ್ರಾಮಸ್ಥರು ಲಿಖಿತ ದೂರು ನೀಡಿಲ್ಲ ಎಂಬ ಕಾರಣ ಮುಂದಿಟ್ಟುಕೊಂಡು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ತಾಲೂಕು ಆಡಳಿತ ಸಮಸ್ಯೆಯನ್ನು ಕಡೆಗಣಿಸಿದೆ. ಗ್ರಾಮಸ್ಥರು ಬಂದು ದೂರು ನೀಡುವವರೆಗೂ ಕಾಯದೆ, ಸ್ಥಳೀಯ ಆಡಳಿತವೇ ಸ್ವಯಂಪ್ರೇರಿತವಾಗಿ ಸ್ಥಳ ಪರಿಶೀಲನೆ ನಡೆಸಿ ಸ್ಥಗಿತಗೊಂಡಿರುವ ಕಾಮಗಾರಿಯನ್ನು ತಕ್ಷಣ ಪೂರ್ಣಗೊಳಿಸಬೇಕು ಹಾಗೂ ಶಾಲಾ ಮಕ್ಕಳಿಗೆ ಆಗುತ್ತಿರುವ ಕಿರಿಕಿರಿ ತಪ್ಪಿಸಬೇಕು ಎಂದು ಪ್ರಜ್ಞಾವಂತ ಸಾರ್ವಜನಿಕರು ಆಗ್ರಹಿಸಿದ್ದಾರೆ.

# ಕೂಡ್ಲಿಗಿಯಲ್ಲಿ ಕಮಲಾಪುರ ಪಿಯು ಕಾಲೇಜು ಕಬಡ್ಡಿ ಪಡೆಗೆ ಭರ್ಜರಿ ಜಯ; ಜಿಲ್ಲಾ ಚಾಂಪಿಯನ್ ಆಗಿ ರಾಜ್ಯಮಟ್ಟಕ್ಕೆ ಆಯ್ಕೆ

**ಹೊಸಪೇಟೆ ಧ್ವನಿ ನ್ಯೂಸ್ :**
**ವಿಜಯನಗರ :** ಜಿಲ್ಲೆಯ ಕೂಡ್ಲಿಗಿಯಲ್ಲಿ ಶನಿವಾರ ನಡೆದ ಜಿಲ್ಲಾಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಹೊಸಪೇಟೆ ತಾಲೂಕಿನ ಕಮಲಾಪುರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಕ್ರೀಡಾಪಟುಗಳು ಅಪ್ರತಿಮ ಪ್ರದರ್ಶನ ನೀಡಿ ಚಾಂಪಿಯನ್ ಪಟ್ಟ ಅಲಂಕರಿಸಿದ್ದಾರೆ.
ರೋಚಕವಾಗಿ ಸಾಗಿದ ಕಬಡ್ಡಿ ಫೈನಲ್ ಪಂದ್ಯದಲ್ಲಿ ಆತಿಥೇಯ ಕೂಡ್ಲಿಗಿ ಪಿಯು ಕಾಲೇಜು ತಂಡವನ್ನು ಕಮಲಾಪುರ ಕಾಲೇಜು ತಂಡ ಎದುರಿಸಿತು. ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಕಮಲಾಪುರದ ಆಟಗಾರರು ಎದುರಾಳಿ ತಂಡದ ಮೇಲೆ ಸಂಪೂರ್ಣ ಹಿಡಿತ ಸಾಧಿಸಿ ಬರೋಬ್ಬರಿ 23 ಅಂಕಗಳನ್ನು ಕಲೆಹಾಕಿದರು. ಕೂಡ್ಲಿಗಿ ತಂಡ



5 ಅಂಕಗಳಿಗೆ ತೃಪ್ತಿಪಡಬೇಕಾಯಿತು. ಅಂತಿಮವಾಗಿ ಕಮಲಾಪುರ ತಂಡ 18 ಅಂಕಗಳ ಬೃಹತ್ ಅಂತರದಿಂದ ಗೆಲುವು ಸಾಧಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿತು. ಕಾಲೇಜಿನ ಉಪನ್ಯಾಸಕ ಶರಣಪ್ಪ ಅವರ ಮಾರ್ಗದರ್ಶನ ಹಾಗೂ ನಾಯಕ ಅವಿನ್ ಕುಮಾರ್ ಅವರ ಚುರುಕಿನ ನಾಯಕತ್ವದಲ್ಲಿ ತಂಡವು ಸಂಘಟಿತ ಆಟ ಪ್ರದರ್ಶಿಸಿತು. ತಂಡದ ಸದಸ್ಯರಾದ ಚೇತನ್ ಕುಮಾರ್, ಹನುಮಂತ ನಾಯ್ಕ, ಅಪ್ಪು ನಾಯ್ಕ, ಕೃಷ್ಣ ಕುಮಾರ್, ಆನಂದ್ ನಾಯ್ಕ, ಸಂತೋಷ್, ವೆಂಕಟೇಶ್, ಶರತ್ ಹಾಗೂ ಹರಿದಾಸ ಅವರ ಆಕರ್ಷಕ ಆಟ, ಬಲಿಷ್ಠ ಟ್ಯಾಕಲ್ ಮತ್ತು ರೈಡಿಂಗ್ ಕ್ರೀಡಾಭಿಮಾನಿಗಳನ್ನು ಮಂತ್ರಮುಗ್ಧಗೊಳಿಸಿತು. ಜಿಲ್ಲಾಮಟ್ಟದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ರಾಜ್ಯಮಟ್ಟಕ್ಕೆ ಅರ್ಹತೆ ಪಡೆದಿದ್ದಾರೆ.

## ಚಲಿಸುತ್ತಿದ್ದ ಬಸ್‌ನಲ್ಲೇ ವೃದ್ಧನ 1 ಕೋಟಿ ಮೌಲ್ಯದ ಚಿನ್ನ ಎಗರಿಸಿದ ಕಳ್ಳಿಯರು

**ಚೆನ್ನೈ:** ಚಲಿಸುತ್ತಿದ್ದ ಸಿಟಿ ಬಸ್‌ನಲ್ಲೇ 73 ವರ್ಷದ ಆಭರಣ ವ್ಯಾಪಾರಿ ಉದ್ಯೋಗಿಯ ಗಮನವನ್ನು ಬೇ–ರೆಡೆ ಸೆಳೆದು, ಆತನ ಬ್ಯಾಗ್‌ನಲ್ಲಿದ್ದ ಬರೋಬ್ಬರಿ 1 ಕೋಟಿ ಮೌಲ್ಯದ 714 ಗ್ರಾಂ ಚಿನ್ನದ ಗಟ್ಟಿಯನ್ನು ಕಳವು ಮಾಡಿದ ಆರೋಪದ ಮೇಲೆ ಆಂಧ್ರಪ್ರದೇಶ ಮೂಲದ ಮಹಿಳೆಯೊಬ್ಬಳನ್ನು ಚೆನ್ನೈ ಪೊಲೀಸರು ಬಂಧಿಸಿದ್ದಾರೆ.
ಬಂಧಿತ ಮಹಿಳೆಯನ್ನು ಆಂಧ್ರಪ್ರದೇಶ ಮೂಲದ ಸುಧಾ ಅಲಿಯಾಸ್ ಸುಕನ್ಯಾ ಎಂದು ಗುರುತಿಸಲಾಗಿದೆ. ಕಳವು ಪ್ರಕರಣದ ತನಿಖೆ ನಡೆಸುತ್ತಿದ್ದ ವಿಶೇಷ ಪೊಲೀಸ್ ತಂಡ ಆಕೆಯನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ಕೃತ್ಯದಲ್ಲಿ ಆಕೆಯೊಂದಿಗೆ ಇನ್ನೂ ಮೂವರು ಮಹಿಳೆಯರು ಭಾಗಿಯಾಗಿರುವ ಶಂಕೆ ಇದ್ದು, ಅವರಿಗಾಗಿ ಪೊಲೀಸರು ಶೋಧ ನಡೆಸುತ್ತಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ ಬಸ್ ನಲ್ಲಿ ಪ್ರಯಾಣಿಸುತ್ತಿದ್ದ 73 ವರ್ಷದ ವೃದ್ಧ ಗಮನ ಬೇರೆಡೆ ಸೆಳೆದು ಬಳಿಕ ಆತನ ಬ್ಯಾಗ್ ನಲ್ಲಿದ್ದ 1 ಕೋಟಿ ರೂ ಮೌಲ್ಯದ ಚಿನ್ನದ ಗಟ್ಟಿಗಳನ್ನು ಈ ಖತರ್ನಾಕ್ ಗ್ಯಾಂಗ್ ಕಳ್ಳತನ ಮಾಡಿದೆ ಎಂದು ಹೇಳಲಾಗಿದೆ.

# ಕೂಡ್ಲಿಗಿ : ರಸ್ತೆ ಅಗಲೀಕರಣದಲ್ಲಿ ತೆರವಾದ ಅಂಬೇಡ್ಕರ್ ಭವನ ಪುನರ್ ನಿರ್ಮಾಣಕ್ಕೆ ಆಗ್ರಹ

**ಹೊಸಪೇಟೆ ಧ್ವನಿ ನ್ಯೂಸ್ :**
**ಕೂಡ್ಲಿಗಿ :** ತಾಲೂಕಿನ ಗುಡೇಕೋಟೆ ಗ್ರಾಮದಲ್ಲಿ ರಸ್ತೆ ಅಗಲೀಕರಣ ಸಂದರ್ಭದಲ್ಲಿ ತೆರವಾದ ಡಾ. ಬಿ.ಆರ್. ಅಂಬೇಡ್ಕರ್ ಭವನವನ್ನು ಪುನಃ ನಿರ್ಮಿಸಿಕೊಡುವಂತೆ ಅಂಬೇಡ್ಕರ್ ಕಾಲೋನಿಯ ಮುಖಂಡರು ಶಾಸಕ ಡಾ. ಎನ್.ಟಿ. ಶ್ರೀನಿವಾಸ್ ಅವರಿಗೆ ಮನವಿ ಮಾಡಿದರು.
ಗುಡೇಕೋಟೆ ಗ್ರಾಮದ ರಾಜ್ಯ ಹೆದ್ದಾರಿ ಮುಖ್ಯ ರಸ್ತೆ ಅಗಲೀಕರಣ ಕಾಮಗಾರಿ ವೇಳೆ ಡಾ. ಬಿ.ಆರ್. ಅಂಬೇಡ್ಕರ್ ಕಾಲೋನಿಯಲ್ಲಿದ್ದ ಹಳೆಯ ಸಮುದಾಯ ಭವನ ತೆರವುಗೊಂಡಿದೆ. ಈ ಭವನವು ಸಮುದಾಯದ ಸಭೆ–ಸಮಾರಂಭಗಳಿಗೆ ಅನುಕೂಲವಾಗಿತ್ತು. ಈಗ ಭವನವಿಲ್ಲದೆ ಕಾರ್ಯಕ್ರಮ ಆಯೋಜಿಸಲು ತೊಂದರೆ–ಯಾಗುತ್ತಿದೆ. ಆದ್ದರಿಂದ ನೂತನ ಅಂಬೇಡ್ಕರ್ ಸಮುದಾಯ ಭವನ ಮಂಜೂರು ಮಾಡಿಸಿ ಪುನರ್ ನಿರ್ಮಾಣ ಮಾಡಿಕೊಡಬೇಕೆಂದು ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ಒಕ್ಕೊರಲಿನಿಂದ ಮನವಿ ಮಾಡಿದರು.
ಈ ವೇಳೆ ಮುಖಂಡರಾದ ಗುಡೇಕೋಟೆ ಹೆಚ್. ನಾಗೇಂದ್ರಪ್ಪ, ಎಸ್.ಜಿ. ನಾಗರಾಜ, ಕೆ. ಮಂಜುನಾಥ್, ಜೈರಾಮ್ ಸಿ, ಬಿ. ಕೃಷ್ಣಮೂರ್ತಿ, ಹನುಮಂತಪ್ಪ ಕೆ., ಶಿವಕುಮಾರ್, ಎಂ. ಇಂದ್ರೇಶ್, ಕೆ. ತಿಪ್ಪೇಸ್ವಾಮಿ, ಮಹಾಂತೇಶ್, ನಾಗರಾಜ, ಪೂಜಾ ದಾಖಲೆ ಕೆ. ವೆಂಕಟೇಶ್, ಹುಲುಗಪ್ಪ, ದೇವೇಂದ್ರಪ್ಪ, ಅಡವಿ ಸಿದ್ದಪ್ಪ, ಬಂಡೆ ನಾಗರಾಜಪ್ಪ, ಎಂ.ಬಿ. ಪಾಲಣ್ಣ ಹಾಗೂ ಕರೆ ಪಾಲಣ್ಣ ಸೇರಿದಂತೆ ಇತರರು ಇದ್ದರು.



## ಯೋಗೀಶ್ ಗೌಡ ಕೊಲೆ ಪ್ರಕರಣ: ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿಗೆ ತಾತ್ಕಾಲಿಕ ರಿಲೀಫ್; ಅ.27ಕ್ಕೆ ವಿಚಾರಣೆ ಮುಂದೂಡಿಕೆ

**ಬೆಂಗಳೂರು:** ಧಾರವಾಡದ ಬಿಜೆಪಿ ಮುಖಂಡ ಯೋಗೀಶ್ ಗೌಡ ಕೊಲೆ ಪ್ರಕರಣದಲ್ಲಿ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ತಾತ್ಕಾಲಿಕ ರಿಲೀಫ್ ಸಿಕ್ಕಿದೆ.



ವಿನಯ್ ಕುಲಕರ್ಣಿಗೆ ನೀಡಿದ್ದ ಜೀವಾವಧಿ ಶಿಕ್ಷೆಗೆ ತಡೆ ನೀಡಿ, ಜಾಮೀನು ಮಂಜೂರು ಮಾಡಿರುವ ಕರ್ನಾಟಕ ಹೈಕೋರ್ಟ್ ಆದೇಶ ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಮೇಲ್ಮನವಿ ಅರ್ಜಿಯ ವಿಚಾರಣೆ ಶುಕ್ರವಾರ ಸುಪ್ರೀಂ ಕೋರ್ಟ್‌ನಲ್ಲಿ ನಡೆಯಿತು.
ಸಿಬಿಐ ಮತ್ತು ಯೋಗೀಶ್ ಗೌಡ ಅವರ ಸಹೋದರ ಗುರುನಾಥ್ ಗೌಡ ಅವರು ಸಲ್ಲಿಸಿರುವ ಮೇಲ್ಮನವಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಮತ್ತು ಚಂದ್ರಶೇಖರ್ ಅವರಿದ್ದ ಪೀಠ, ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿ, ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿದೆ.
ಸಿಬಿಐ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ಎಸ್.ವಿ. ರಾಜು ಅವರು, ಅಪರೂಪದ ಪ್ರಕರಣಗಳಲ್ಲಿ ಮಾತ್ರ ಶಿಕ್ಷೆಗೆ ತಡೆಯಾಜ್ಞೆ ನೀಡಬೇಕು ಎಂದು ವಾದಿಸಿದರು. ಈ ಸಂಬಂಧ ಸುಪ್ರೀಂ ಕೋರ್ಟ್‌ನ ಮೂರು ತೀರ್ಪುಗಳನ್ನು ಉಲ್ಲೇಖಿಸಿದರು. ಸಾರ್ವಜನಿಕ ಸೇವಕರಾಗಿರುವ ವ್ಯಕ್ತಿಗಳಿಗೆ ಸಹಜವಾಗಿ ಶಿಕ್ಷೆಗೆ ತಡೆಯಾಜ್ಞೆ ನೀಡಬಾರದು ಎಂಬ ವಾದಿಸಿದರು.
ಈ ಹಿಂದೆ ಸಾಕ್ಷ್ಯ ನಾಶಪಡಿಸಿದ ಆರೋಪದ ಹಿನ್ನೆಲೆಯಲ್ಲಿ ವಿನಯ್ ಕುಲಕರ್ಣಿ ಅವರ ಜಾಮೀನನ್ನು ಸುಪ್ರೀಂಕೋರ್ಟ್ ರದ್ದುಗೊಳಿಸಿತ್ತು ಎಂದು ಸಿಬಿಐ ನ್ಯಾಯಾಲಯದ ಗಮನಕ್ಕೆ ತಂದಿತು. ಅಲ್ಲದೆ, ಹಿಂದಿನ ಎರಡು ಕ್ರಿಮಿನಲ್ ಪ್ರಕರಣಗಳ ವಿವರಗಳನ್ನು ಹೈಕೋರ್ಟ್ ಮುಂದೆ ಬಹಿರಂಗಪಡಿಸಿಲ್ಲ ಎಂದೂ ಸಿಬಿಐ ವಾದಿಸಿತು.
ಈ ವೇಳೆ ವಿನಯ್ ಕುಲಕರ್ಣಿ ಪರ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ವಾದ ಮಂಡಿಸಿ, ಎರಡು ವಾರಗಳ ಕಾಲಾವಕಾಶ ನೀಡುವಂತೆ ಮನವಿ ಮಾಡಿದರು. ಯಾರೂ ಓಡಿಹೋಗುವುದಿಲ್ಲ ಎಂದು ನ್ಯಾಯಪೀಠಕ್ಕೆ ತಿಳಿಸಿದರು. ವಾದ, ಪ್ರತಿವಾದ ಆಲಿಸಿದ ಸುಪ್ರೀಂ ಕೋರ್ಟ್, ವಿಚಾರಣೆಯನ್ನು ಅಕ್ಟೋಬರ್ 27ಕ್ಕೆ ಮುಂದೂಡಿತು. ಅಂದು ವಿಚಾರಣೆಯನ್ನು ಮುಂದೂಡುವುದಿಲ್ಲ ಎಂದು ಸಹ ಪೀಠ ಸ್ಪಷ್ಟಪಡಿಸಿದೆ.

### ಹಗರಿಯ ಕೃಷಿ ವಿಜ್ಞಾನ ಕೇಂದ್ರದಲ್ಲಿ ಮೆಣಸಿನಕಾಯಿ ಬೆಳೆಯ ಉತ್ಪಾದನಾ ತಾಂತ್ರಿಕತೆ ಕುರಿತು ಕಾರ್ಯಾಗಾರ

# ರಫ್ತಿಗೆ ಹೆಚ್ಚಿನ ಒತ್ತು ಹಾಗೂ ಸಾವಯವ ಕೃಷಿಗೆ ಕರೆ: ಡಾ. ಕೃಷ್ಣಕುಮಾರ್

**ಹೊಸಪೇಟೆ ಧ್ವನಿ ನ್ಯೂಸ್ :**
**ಬಳ್ಳಾರಿ :** ಮೆಣಸಿನಕಾಯಿ ಬೆಳೆಯುವ ರೈತರು ಗುಣಮಟ್ಟದ ಇಳುವರಿ ಪಡೆದು ವಿದೇಶಗಳಿಗೆ ರಫ್ತು ಮಾಡುವುದರಿಂದ ಹೆಚ್ಚಿನ ಲಾಭ ಗಳಿಸಲು ಸಾಧ್ಯ. ರೈತರು ಸಾವಯವ ಪದ್ಧತಿಯಲ್ಲಿ ಮೆಣಸಿನಕಾಯಿ ಬೆಳೆಯಲು ಆದ್ಯತೆ ನೀಡಬೇಕು ಎಂದು ನವದೆಹಲಿಯ ಐ.ಸಿ.ಎ.ಆರ್.ನ ಮಾಜಿ ನಿರ್ದೇಶಕ ಡಾ. ಕೃಷ್ಣಕುಮಾರ್ ಎನ್.ಕೆ. ಅವರು ಹೇಳಿದರು.
ಇಲ್ಲಿನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು ವ್ಯಾಪ್ತಿಯ ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ (ಕೆ.ವಿ.ಕೆ.), ಹಗರಿ, ತೋಟಗಾರಿ–ಕೆ ಇಲಾಖೆ ಹಾಗೂ ಧನುಕಾ ಅಗ್ರಿಟೆಕ್ ಲಿಮಿಟೆ–ಡ್ ಇವರ ಸಂಯುಕ್ತಾಶ್ರಯದಲ್ಲಿ "ಮೆಣಸಿನಕಾಯಿ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು" ಕುರಿತಾದ ಒಂದು ದಿನದ ತರಬೇತಿ ಹಾಗೂ ಕಾರ್ಯಾಗಾರವನ್ನು ಶುಕ್ರವಾರ ಉದ್ಘಾಟಿಸಿ ಅವರು ಮಾತನಾಡಿದರು.
ಹಾವೇರಿ ಜಿಲ್ಲೆಯಲ್ಲಿರುವ ಮೆಣಸಿನಕಾಯಿ ಬೀಜೋತ್ಪಾದನಾ ಘಟಕದಿಂದ ರೈತರು ಗುಣಮಟ್ಟದ ಬೀಜಗಳನ್ನು ಪಡೆದುಕೊಳ್ಳುವಂತೆ ಸಲಹೆ



ನೀಡಿದರು.
ತೋಟಗಾರಿಕೆ ಜಂಟಿ ನಿರ್ದೇಶಕ ಶಶಿಕಾಂತ್ ಕೋಟಿಮನಿ ಅವರು ಮಾತನಾಡಿ, ಬಳ್ಳಾರಿ ಜಿಲ್ಲೆಯಲ್ಲಿ ಸುಮಾರು 34,000 ಎಕರೆ ಪ್ರದೇಶದಲ್ಲಿ ಮೆಣಸಿನಕಾಯಿ ಬೆಳೆಯಲಾಗುತ್ತಿದ್ದು, ಇಡೀ ಕರ್ನಾಟಕ ರಾಜ್ಯದ ಒಟ್ಟು ಉತ್ಪಾದನೆಯ ಶೇ.60ರಷ್ಟು ಪಾಲು ಬಳ್ಳಾರಿ ಜಿಲ್ಲೆಯಿಂದಲೇ ಬರುತ್ತಿದೆ. ರೈತರು ವೈಜ್ಞಾನಿಕ ಪದ್ಧತಿಗಳ ಜೊತೆಗೆ ಜೈವಿಕ ಕೀಟನಾಶಕಗಳನ್ನು ಬಳಸಿ ಬೆಳೆಯಬೇಕು ಹಾಗೂ ಮೆಣಸಿನಕಾಯಿಯ ಮೌಲ್ಯವರ್ಧನೆ ಮಾಡುವುದರಿಂದ ಆರ್ಥಿಕವಾಗಿ ಹೆಚ್ಚಿನ ಲಾಭ ಕಾಣಬಹುದು ಎಂದು ಅಭಿಪ್ರಾಯಪಟ್ಟರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ. ಎ.ಆರ್. ಕುರುಬರ ಅವರು ಮಾತನಾಡಿ, ಉತ್ತರ ಕರ್ನಾಟಕದಲ್ಲಿ ಮೆಣಸಿನಕಾಯಿ ಪ್ರಮುಖ ಬೆಳೆಯಾಗಿದ್ದು, ಅದರಲ್ಲೂ ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಬೆಳೆಯಲಾಗುತ್ತಿದೆ. ಇಲ್ಲಿನ ಬೆಳೆಗೆ ಉತ್ತಮ ರಫ್ತು ಅವಕಾಶಗಳಿವೆ. ಆದರೆ ಅತಿಯಾದ ಕೀಟನಾಶಕಗಳ ಬಳಕೆಯು ಕ್ಯಾನ್ಸರ್‌ನಂತಹ ಮಾರಕ ರೋಗಗಳಿಗೆ ಕಾರಣವಾಗಬಹುದು. ಹಾಗಾಗಿ ಕೀಟನಾಶಕಗಳ ಬಳಕೆಯನ್ನು ಕಡಿಮೆ ಮಾಡಿ, ಗುಣಮಟ್ಟದ ಮೆಣಸಿನಕಾಯಿ ಬೆಳೆಯಲು ರೈತರು ಮುಂದಾಗಬೇಕು ಎಂದು ಕರೆ ನೀಡಿ–ದರು.
ತಜ್ಞರಿಂದ ಮಾಹಿತಿ ಹಾಗೂ ರೈತ–ವಿಜ್ಞಾನಿ ಸಂವಾದ: ಕಾರ್ಯಾಗಾರದಲ್ಲಿ ನುರಿತ ಕೃಷಿ ವಿಷಯ ತಜ್ಞರಿಂದ ಮೆಣಸಿನಕಾಯಿ ಬೆಳೆಯ ಸುಧಾರಿತ ಬೇಸಾಯ ಕ್ರಮಗಳ ಕುರಿತು ರೈತರಿಗೆ ಸಮಗ್ರ ವೈಜ್ಞಾನಿಕ ಮಾಹಿತಿ ನೀಡಲಾಯಿತು. ಇದೇ ವೇಳೆ ರೈತರ ಸಂಶಯಗಳನ್ನು ನಿವಾರಿಸಲು ಸುಮಾರು ಎರಡು ಗಂಟೆಗಳ ಕಾಲ 'ರೈತ ಮತ್ತು ವಿಜ್ಞಾನಿಗಳ ಸಂವಾದ' ಕಾರ್ಯಕ್ರಮವೂ ಯಶಸ್ವಿಯಾಗಿ ನಡೆಯಿತು.
ಕಾರ್ಯಕ್ರಮದ ಆರಂಭದಲ್ಲಿ ಹಿರಿಯ ವಿಜ್ಞಾನಿ ಹಾಗೂ ಕೇಂದ್ರದ ಮುಖ್ಯಸ್ಥ ಡಾ. ರವಿ ಎಸ್. ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ ಅತಿಥಿಗಳನ್ನು ಸ್ವಾಗತಿಸಿದರು. ಕೃಷಿ ವಿಸ್ತರಣೆಯ ವಿಜ್ಞಾನಿ ಡಾ. ನವೀನ್ ಕುಮಾರ್ ಪಿ. ಕಾರ್ಯಕ್ರಮ ನಿರೂಪಿಸಿದರು. ಬಳ್ಳಾರಿ ತಾಲೂಕಿನ ವಿವಿಧ ಹಳ್ಳಿಗಳಿಂದ ಆಗಮಿಸಿದ್ದ ಸುಮಾರು 550ಕ್ಕೂ ಹೆಚ್ಚು ರೈತರು ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದರು.
ಈ ಸಂದರ್ಭದಲ್ಲಿ ಬೆಂಗಳೂರಿನ ಐಸಿಎಆರ್–ಅಟಾರಿ ನಿರ್ದೇಶಕ ಡಾ. ಪ್ರಭಾಕರ್ ಎಂ., ಪ್ರಧಾನ ವಿಜ್ಞಾನಿ ಡಾ. ತಿಮ್ಮಪ್ಪ ಕೆ., ಐಸಿಎಆರ್–ಐಐಎಸ್‌ಡಬ್ಲ್ಯುಸಿ ಕೇಂದ್ರದ ಮುಖ್ಯಸ್ಥ ಡಾ. ಕೃಷ್ಣರಾವ್ ಬಿ., ಜಂಟಿ ಕೃಷಿ ನಿರ್ದೇಶಕ ಸೋಮಸುಂದರ್ ಕೆ.ಎಂ., ಪಶು ವಿಜ್ಞಾನ ಪ್ರಾಧ್ಯಾಪಕ ಡಾ. ರಮೇಶ್ ಬಿ.ಕೆ., ಕೃಷಿ ಸಂಶೋಧನಾ ಕೇಂದ್ರದ ಮುಖ್ಯಸ್ಥ ಡಾ. ಗಿರೀಶ್ ಜಿ., ಗಂಗಾವತಿಯ ಹಿರಿಯ ವಿಜ್ಞಾನಿ ಡಾ. ರಾಘವೇಂದ್ರ ಎಲಿಗಾರ್ ಹಾಗೂ ಧನುಕಾ ಅಗ್ರಿಟೆಕ್ ಲಿಮಿಟೆಡ್‌ನ ಅಧಿಕಾರಿಗಳಾದ ಡಾ. ಎಂ. ಪರಶುರಾಮಯ್ಯ, ಪವನಕುಮಾರ್ ಉಜಲಾ, ಮರಿಬಸಪ್ಪ ಮುಂತಾದವರು ಉಪಸ್ಥಿತರಿದ್ದರು.
ಧನುಕಾ ಕಂಪನಿಯ ವ್ಯವಹಾರ ವ್ಯವಸ್ಥಾಪಕ ಉಮಾಕಾಂತ್ ಎಸ್. ತಂಬೂಲೆ ವಂದಿಸಿದರು.

## ತೆಕ್ಕಲಕೋಟೆ ಸಮುದಾಯ ಆರೋಗ್ಯ ಕೇಂದ್ರದಲ್ಲಿ ವಿದ್ಯುತ್ ವ್ಯತ್ಯಯ: ಸ್ಪಷ್ಟನೆ ನೀಡಿದ ಬಳ್ಳಾರಿ ಜಿಲ್ಲಾ ಆರೋಗ್ಯ ಇಲಾಖೆ



**ಹೊಸಪೇಟೆ ಧ್ವನಿ ನ್ಯೂಸ್ :**
**ಬಳ್ಳಾರಿ :** ಸಿರುಗುಪ್ಪ ತಾಲೂಕಿನ ತೆಕ್ಕಲಕೋಟೆ ಸಮುದಾಯ ಆರೋಗ್ಯ ಕೇಂದ್ರದ ಹೆರಿಗೆ ವಾರ್ಡ್‌ನಲ್ಲಿ ಮೂಲಸೌಕರ್ಯಗಳ ಕೊರತೆಯಿದ್ದು, ವಿದ್ಯುತ್ ಕಡಿತಗೊಂಡಾಗ ಮೊಬೈಲ್ ಟಾರ್ಚ್ ಬಳಸಿ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದ ವರದಿಗೆ ಸಂಬಂಧಿಸಿದಂತೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಸ್ಪಷ್ಟನೆ ನೀಡಿ–ದ್ದಾರೆ.
ಈ ಕುರಿತು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಸಿರುಗುಪ್ಪ ತಾಲೂಕು ಆರೋಗ್ಯಾಧಿಕಾರಿಗಳು ವರದಿ ಸಲ್ಲಿಸಿದ್ದು, ಅಕ್ಟೋಬರ್ 6ರಂದು ಪಿ.ಎನ್.ಸಿ ವಿಭಾಗದಲ್ಲಿ ಸುಮಾರು 20 ನಿಮಿಷಗಳ ಕಾಲ ವಿದ್ಯುತ್ ವ್ಯತ್ಯಯ ಉಂಟಾಗಿತ್ತು ಎಂದು ತಿಳಿಸಿದ್ದಾರೆ.
ಆಸ್ಪತ್ರೆಯ ಸಿ.ಸಿ.ಟಿ.ವಿ ಪರಿಶೀಲಿಸಿದಾಗ, ದಾಖಲಾಗಿದ್ದ ರೋಗಿಯೊಬ್ಬರ ಸಂಬಂಧಿಕರು ಬ್ಯಾಟರಿ ಸ್ವಿಚ್ ಆಫ್ ಮಾಡಿದ್ದರಿಂದ ಬ್ಯಾಟರಿ ಚಾರ್ಜ್ ಆಗದೆ ಈ ತಾತ್ಕಾಲಿಕ ವ್ಯತ್ಯಯ ಉಂಟಾಗಿರುವುದು ಬೆಳಕಿಗೆ ಬಂದಿದೆ. ಆ ಸಂದರ್ಭದಲ್ಲಿ ರೋಗಿಗಳಿಗೆ ಯಾವುದೇ ತೊಂದರೆಯಾಗಿಲ್ಲ ಎಂದು ವರದಿಯಲ್ಲಿ ಸ್ಪಷ್ಟಪಡಿಸಲಾಗಿದೆ.
ಆಸ್ಪತ್ರೆಯಲ್ಲಿ ತುರ್ತು ವಿದ್ಯುತ್ ಪೂರೈಕೆಗಾಗಿ ಈಗಾಗಲೇ 7 ಯು.ಪಿ.ಎಸ್ ಬ್ಯಾಟರಿಗಳು ಹಾಗೂ 62.5 ಕೆವಿ ಜನರೇಟರ್ ವ್ಯವಸ್ಥೆ ಲಭ್ಯವಿದೆ. ಬ್ಯಾಟರಿಗಳು, ಡಿಸ್ಟಿಲ್ಡ್ ವಾಟರ್ ಮತ್ತು ಜನರೇಟರ್ ನಿರ್ವಹಣೆ ಕುರಿತು ನಿಗಾ ವಹಿಸಲು ಆಡಳಿತ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಜತೆಗೆ ಸಾರ್ವಜನಿಕರು ಅಥವಾ ರೋಗಿಗಳ ಸಂಬಂಧಿಕರು ಸ್ವಿಚ್‌ಗಳನ್ನು ಮುಟ್ಟದಂತೆ ಎಚ್ಚರಿಕೆ ಫಲಕ ಅಳವಡಿಸಲು ನಿರ್ದೇಶಿಸಲಾಗಿದೆ.
ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ವಿಡಿಯೋ ಕಾನ್ಫರೆನ್ಸ್‌ನಲ್ಲಿ, ಜಿಲ್ಲೆಯ ಎಲ್ಲಾ ಆರೋಗ್ಯ ಕೇಂದ್ರಗಳಲ್ಲೂ ಜನರೇಟರ್ ವ್ಯವಸ್ಥೆ ಸುಸ್ಥಿತಿಯಲ್ಲಿದ್ದು ರೋಗಿಗಳಿಗೆ ತೊಂದರೆಯಾಗದಂತೆ ಎಚ್ಚರವಹಿಸಲು ಸೂಚಿಸಲಾಗಿದೆ ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳು ಆಯುಕ್ತರಿಗೆ ಸಲ್ಲಿಸಿರುವ ವರದಿಯಲ್ಲಿ ವಿವರಿಸಿದ್ದಾರೆ.

## ಹಿರೇಹಡಗಲಿ: 2.38 ಲಕ್ಷ ಮೌಲ್ಯದ 106 ಕ್ವಿಂಟಲ್ ಪಡಿತರ ಅಕ್ಕಿ ವಶ




**ಹೊಸಪೇಟೆ ಧ್ವನಿ ನ್ಯೂಸ್ :**
**ವಿಜಯನಗರ ( ಹೊಸಪೇಟೆ) :** ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಕ್ಟೋಬರ್ 10ರಂದು ವಾಹನ ಸಂಖ್ಯೆ ಇಚಿ –25 ಃ 1751ವಾಹನವನ್ನು ಪರಿಶೀಲಿಸಿದಾಗ, ಅಕ್ರಮವಾಗಿ ಸಾಗಿಸುತ್ತಿದ್ದ ರೂ.2,38,500 ಮೌಲ್ಯದ ಒಟ್ಟು 106 ಕ್ವಿಂಟಲ್ ಪಡಿತರ ಅಕ್ಕಿ ಮೂಟೆಗಳು ವಶಪಡಿಸಿಕೊಳ್ಳಲಾಗಿದೆ.
ಈ ಸಂಬಂಧ ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಹೂವಿನಹಡಗಲಿ ತಾಲೂಕಿನ ಆಹಾರ ನಿರೀಕ್ಷಕ ನವೀನ್ ಕುಮಾರ್ ಅವರು ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಇಲಾಖೆ ಉಪನಿರ್ದೇಶಕ ರಿಯಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಚಿನ್ನದ ಒಡವೆ ವಿಚಾರಕ್ಕೆ ಜಗಳ: ಹೆತ್ತ ತಾಯಿ ಕೊಂದು ಆಕಸ್ಮಿಕ ಎಂದು ನಾಟಕ,

**ಬೆಂಗಳೂರು:** ಚಿನ್ನದ ಒಡವೆ ವಿಚಾರವಾಗಿ ತಾಯಿಯೊಂದಿಗೇ ಜಗಳ ತೆಗೆದು, ಆಕೆಯನ್ನು ಭೀಕರವಾಗಿ ಹೊಡೆದು ಪುತ್ರನೊಬ್ಬ ಹತ್ಯೆ ಮಾಡಿರುವ ಘಟನೆ ಕೊಂದಿರುವ ಘಟನೆ ಬೆಂಗಳೂರಿನ ಕಾಡುಗೋಡಿಯಲ್ಲಿ ನಡೆದಿದೆ.
ಮೃತರನ್ನು ಬೇವಿನ ಮರ ಕಾಲೋನಿಯ ನಿವಾಸಿ ಭಾಗ್ಯಮ್ಮ (60) ಎಂದು ಗುರುತಿಸಲಾಗಿದೆ. ಅವರ ಮೂರನೇ ಮಗ ಬಾಲಾಜಿ (35) ಕೊಲೆ ಆರೋಪದ ಮೇಲೆ ಬಂಧಿತನಾಗಿದ್ದಾನೆ.
ಕೊಲೆಯ ನಂತರ ಆರೋಪಿಯು ಇದನ್ನು 'ಆಕಸ್ಮಿಕವಾಗಿ ಕೆಳಗೆ ಬಿದ್ದು ಸಂಭವಿಸಿದ ಸಾವು' ಎಂದು ಬಿಂಬಿಸಲು ಹರಸಾಹಸ ಪಟ್ಟಿದ್ದರೂ, ವೈದ್ಯಕೀಯ ವರದಿಯಿಂದಾಗಿ ಆತನ ಪಾಪದ ಕೃತ್ಯ ಬಯಲಾಗಿದೆ.
ಬಂಧನದ ಬಳಿಕ ಆರೋಪಿ ಪೊಲೀಸರಿಗೆ ನೀಡಿರುವ ಹೇಳಿಕೆಯಲ್ಲಿ, ತಂದೆಯ ಮರಣದ ನಂತರ ತಾಯಿ ಮದ್ಯಪಾನ ಮಾಡಲು ಆರಂಭಿಸಿದ್ದರು. ಆಗಾಗ ಮನೆಯಲ್ಲಿ ಗಲಾಟೆ ಮಾಡುತ್ತಿದ್ದರು. ಅಲ್ಲದೆ, ಮನೆಯ ಸಮೀಪ ವ್ಯಕ್ತಿಯೊಬ್ಬರು ಆಗಾಗ ಕುಳಿತುಕೊಳ್ಳುತ್ತಿದ್ದ ವಿಚಾರವಾಗಿ ನೆರೆಹೊರೆಯವರು ತಾಯಿಯ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಿದ್ದಾರೆ ಎಂಬ ಕೋಪವೂ ತನಗಿತ್ತು ಎಂದು ಆತ ಹೇಳಿದ್ದಾನೆ ಎನ್ನಲಾಗಿದೆ.
ತಾಯಿಯ 32 ಗ್ರಾಂ ಚಿನ್ನಾಭರಣಗಳನ್ನು ಆರೋಪಿ ಅಡವಿಟ್ಟಿದ್ದು, ಅವುಗಳನ್ನು ವಾಪಸ್ ನೀಡುವಂತೆ ಭಾಗ್ಯಮ್ಮ ಒತ್ತಾಯಿಸುತ್ತಿದ್ದಾರೆ. ಈ ವಿಚಾರವಾಗಿ ಸೆಪ್ಟೆಂಬರ್ 24 ರಾತ್ರಿ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದೆ.

## ಹೆಣ್ಣು ಮಕ್ಕಳ ರಕ್ಷಣೆ, ಶಿಕ್ಷಣಕ್ಕೆ ಎಲ್ಲರೂ ಕೈಜೋಡಿಸಿ: ಶಾರದಾ ಬಾಯಿ

**ಹೊಸಪೇಟೆ ಧ್ವನಿ ನ್ಯೂಸ್ :**
**ಕೂಡ್ಲಿಗಿ :** ಹೆಣ್ಣು ಮಕ್ಕಳ ರಕ್ಷಣೆ, ಶಿಕ್ಷಣ ಮತ್ತು ಸಬಲೀಕರಣಕ್ಕೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಪ.ಪಂ ಮಾಜಿ ಅಧ್ಯಕ್ಷೆ ಶಾರದಾ ಬಾಯಿ ಹೇಳಿದರು.
ಪಟ್ಟಣದ ಅಂಗನವಾಡಿ 'ಕೆ' ಕೇಂದ್ರದಲ್ಲಿ 'ಬೇಟಿ ಬಚಾವೋ, ಬೇಟಿ ಪಢಾವೋ' ಅಭಿಯಾನಕ್ಕೆ ಗಿಡಕ್ಕೆ ನೀರು ಹಾಕುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.
ಕೇಂದ್ರ ಸರ್ಕಾರ ಜಾರಿಗೆ ತಂದಿರುವ 'ಬೇಟಿ ಬಚಾವೋ, ಬೇಟಿ ಪಢಾವೋ' ಯೋಜನೆಯು ಸಮಾಜದಲ್ಲಿ ಹೆಣ್ಣು ಮಕ್ಕಳ ಬಗ್ಗೆ ಜಾಗೃತಿ ಮೂಡಿಸುವ ಮಹತ್ವದ ಅಭಿಯಾನವಾಗಿದೆ ಎಂದರು.
ಅಂಗನವಾಡಿ ಶಿಕ್ಷಕಿ ಎಂ. ಜಯಶ್ರೀ ಮಾತನಾಡಿ, 'ಬೇಟಿ ಬಚಾವೋ, ಬೇಟಿ ಪಢಾವೋ'



ಎಂದರೆ ಹೆಣ್ಣು ಮಕ್ಕಳನ್ನು ರಕ್ಷಿಸಿ, ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ ಎಂದರ್ಥ. ಇದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಹೆಣ್ಣು ಭ್ರೂಣ ಹತ್ಯೆ ತಡೆಗಟ್ಟುವುದು, ಲಿಂಗಾನುಪಾತ ಸುಧಾರಿಸುವುದು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದು ಹಾಗೂ ಬಾಲಕಿಯರಿಗೆ ಸಮಾನ ಅವಕಾಶ ಕಲ್ಪಿಸುವುದು ಈ ಯೋಜನೆಯ ಪ್ರಮುಖ ಉದ್ದೇಶಗಳಾಗಿವೆ ಎಂದರು.
ಇಂದಿನ ಸಮಾಜದಲ್ಲಿ ಹೆಣ್ಣು ಮಕ್ಕಳು ಶಿಕ್ಷಣ, ಕ್ರೀಡೆ, ವಿಜ್ಞಾನ, ಆಡಳಿತ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿದ್ದಾರೆ. ಆದರೂ ಕೆಲವೆಡೆ ಬಾಲ್ಯವಿವಾಹ, ಲಿಂಗ ತಾರತಮ್ಯ ಮತ್ತು ಶಿಕ್ಷಣದಿಂದ ವಂಚಿತರಾಗುವ ಸಮಸ್ಯೆಗಳಿವೆ. ಇಂತಹ ಸಮಸ್ಯೆಗಳನ್ನು ನಿವಾರಿಸಲು ಪೋಷಕರು, ಶಿಕ್ಷಕರು, ಸಾರ್ವಜನಿಕರು ಹಾಗೂ ವಿವಿಧ ಇಲಾಖೆಗಳು ಒಟ್ಟಾಗಿ ಕಾರ್ಯನಿರ್ವಹಿಸಬೇಕು.
ಹೆಣ್ಣು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಅವರ ಹಕ್ಕುಗಳು, ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆ ಅರಿವು ಮೂಡಿಸುವುದು ಅಗತ್ಯ. ಹೆಣ್ಣು ಮಕ್ಕಳನ್ನು ಹೊರೆ ಎಂದು ಭಾವಿಸದೆ ಸಮಾಜದ ಅಮೂಲ್ಯ ಸಂಪತ್ತು ಎಂದು ಪರಿಗಣಿಸಬೇಕು. 'ಹೆಣ್ಣು ಮಗು ಉಳಿಸಿ, ಹೆಣ್ಣು ಮಗು ಓದಿಸಿ' ಎಂಬ ಸಂದೇಶವನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾನತೆಯ ಸಮಾಜ ನಿರ್ಮಾಣ ಸಾಧ್ಯ ಎಂದರು.
ಈ ಸಂದರ್ಭದಲ್ಲಿ ಸಹಾಯಕಿ ರೇಣುಕಮ್ಮ, ಕಿಶೋರ್, ಮಕ್ಕಳ ತಾಯಂದಿರು ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಹೆದ್ದಾರಿ ದಾಟುತ್ತಿದ್ದ ಕುರಿ–ಮೇಕೆಗಳ ಮೇಲೆ ಹರಿದ ಟ್ರಕ್; 23 ಕುರಿ, 2 ಮೇಕೆ ಸಾವು

**ಮೊರ್ಬಿ:** ಹೆದ್ದಾರಿ ದಾಟುತ್ತಿದ್ದ ಕುರಿ ಮಂದೆ ಮೇಲೆ ಸರಕುಸಾಗಾಣಿಕಾ ಟ್ರಕ್ ಹರಿದಿದ್ದು, ಈ ವೇಳೆ 23 ಕುರಿ, 2 ಮೇಕೆಗಳು ಸಾವನ್ನಪ್ಪಿವೆ ಎಂದು ತಿಳಿದುಬಂದಿದೆ.
ಗುಜರಾತ್‌ನ ಮೊರ್ಬಿ ಜಿಲ್ಲೆಯ ಮಾಳಿಯಾ–ಮಿಯಾಣಾ ಸಮೀಪದ ಕಚ್ ರಾಷ್ಟ್ರೀಯ ಹೆದ್ದಾರಿಯಲ್ಲಿ ಈ ಘಟನೆ ನಡೆದಿದ್ದು, ವೇಗವಾಗಿ ಬಂದ ಟ್ರಕ್‌ವೊಂದು ಕುರಿ–ಮೇಕೆಗಳ ಹಿಂಡಿಗೆ ಡಿಕ್ಕಿ ಹೊಡೆದ ಪರಿಣಾಮ 25 ಪ್ರಾಣಿಗಳು ಮೃತಪಟ್ಟಿವೆ.
ಅಪಘಾತದ ಭೀಕರ ದೃಶ್ಯ ಹೆದ್ದಾರಿ ಬದಿಯಲ್ಲಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.
ಮೂಲಗಳ ಪ್ರಕಾರ ಮಾಳಧಾರಿ ಸಮುದಾಯದ ಕುರಿಗಾಹಿಗಳ ಗುಂಪೊಂದು ಕುರಿ–ಮೇಕೆಗಳ ಹಿಂಡಿನೊಂದಿಗೆ ಕಚ್ ಕಡೆಗೆ ತೆರಳುತ್ತಿದ್ದಾಗ ಈ ಘಟನೆ ಸಂಭವಿಸಿದೆ. ಹಿಂಡು ಹೆದ್ದಾರಿ ದಾಟುತ್ತಿದ್ದ ವೇಳೆ ಹಿಂದಿನಿಂದ ವೇಗವಾಗಿ ಬಂದ ಟ್ರಕ್ ಪ್ರಾಣಿಗಳಿಗೆ ಡಿಕ್ಕಿ ಹೊಡೆದಿದೆ ಎನ್ನಲಾಗಿದೆ.
ಡಿಕ್ಕಿಯ ರಭಸಕ್ಕೆ ಸ್ಥಳದಲ್ಲೇ 23 ಕುರಿಗಳು ಮತ್ತು ಎರಡು ಮೇಕೆಗಳು ಮೃತಪಟ್ಟಿವೆ. ಇನ್ನು ಸುಮಾರು 25 ಪ್ರಾಣಿಗಳು ಗಾಯಗೊಂಡಿವೆ ಎಂದು ತಿಳಿದುಬಂದಿದೆ.
ಹೆದ್ದಾರಿ ಬದಿಯಲ್ಲಿ ಅಳವಡಿಸಲಾಗಿದ್ದ ಸಿಸಿಟಿವಿ ಕ್ಯಾಮೆರಾದಲ್ಲಿ ಅಪಘಾತದ ಸಂಪೂರ್ಣ ದೃಶ್ಯ ಸೆರೆಯಾಗಿದೆ. ಕುರಿ–ಮೇಕೆಗಳ ಹಿಂಡು ಹೆದ್ದಾರಿ ದಾಟುತ್ತಿರುವಾಗ ವೇಗವಾಗಿ ಬಂದ ಟ್ರಕ್ ಅವುಗಳತ್ತ ನುಗ್ಗಿದೆ.
ಬಳಿಕ ಟ್ರಕ್ ಹಿಂಡಿಗೆ ಡಿಕ್ಕಿ ಹೊಡೆದು ಮುಂದೆ ಸಾಗುತ್ತಿರುವುದು ದೃಶ್ಯದಲ್ಲಿ ಕಂಡುಬಂದಿದೆ.

Hosapete Dhwani Kannada Daily Editor, Printer, Publisher & Owned By K. Prakash Kakubalu, 120, 1ST Ward, Kakubal Post Hospet, Ballary, Dist : Vijayanagara Karnataka State,
Printed at Dwaraka Printers & Publishers, Plot No. 12, Opp. Govt. Girls Hostel, GaneshaNagara Koppal-583231 Koppal District, Karnataka State,
e-mail : hosapetedhwani32026@gmail.com, Cell : 9342568684